ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಕರ್ನಾಟಕ ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ವಿಧೇಯಕ" ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 5 ರವರೆಗೆ

ಉಪಾಧ್ಯಕ್ಷರು: "ಖಂಡ 2ರಿಂದ 5 ರವರೆಗೆ, ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 5 ರವರೆಗೆ, ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆಗಳು ಈ ವಿಧೇಯಕದ ಭಾಗವಾಗಬೇಕು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿ): "ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾದ ರೂಪದಲ್ಲಿರುವ ಕರ್ನಾಟಕ ನಿರಸನ ಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2002" ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾದ ರೂಪದಲ್ಲಿರುವ ಕರ್ನಾಟಕ ನಿರಸನ ಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2002 ನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಆ) ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

+ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೇ, "ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕ, 2002ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನುಮಂಡಿಸಲಾಯಿತು

ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ): ಇದು ಏನು ಬಿಲ್ ಮಂತ್ರಿಗಳು ಸ್ವಲ್ಪ ವಿವರಿಸಲಿ.

ಶ್ರೀ ಉಪಾಧ್ಯಕ್ಷರು: ವಿವರಣೆ ಕೊಡಿ.

4.10 ಪಿ.ಎಂ

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರವು ಕುರಿ ಮತ್ತು ಕುರಿ ಉತ್ಪನ್ನಗಳ ಮಂಡಳಿಯನ್ನು ನಿಗಮವನ್ನಾಗಿ ಪರಿವರ್ತಿಸಲು ನಿರ್ಧರಿಸಿದ ಹಿನ್ನೆಲೆಯಲ್ಲಿ ಕಂಪನಿ ಕಾಯ್ದೆಯಡಿಯಲ್ಲಿ ಈ ಮಂಡಲಿಯನ್ನು ಕರ್ನಾಟಕ ಕುರಿ ಮತ್ತು ಉಣ್ಣೆಯ ಅಭಿವೃದ್ಧಿ ನಿಗಮವನ್ನಾಗಿ ನೋಂದಾವಣೆ ಮಾಡಲಾಗಿದ್ದು ನಿಗಮ ಎಪ್ರಿಲ್ 2002ರಿಂದ ಕಾರ್ಯಾರಂಭ ಮಾಡಲು ಕಂಪನಿಯ ವಹಿವಾಟು ಪ್ರಾರಂಭ ಪ್ರಮಾಣ ಪತ್ರ ಪಡೆಯಲಾಗಿದೆ. ಈಗ ಅಸ್ಥಿತ್ವದಲ್ಲಿರುವ ಮಂಡಲಿಯ ಕಾಯ್ದೆಯನ್ನು ನಿರಸನಗೊಳಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು ಕಾಯ್ದೆ ನಿರಸನಗೊಂಡ ನಂತರ ನಿಗಮದ ಕಾರ್ಯಚಟುವಟಿಕೆ ಪ್ರಾರಂಭಿಸಬೇಕಾಗಿದೆ. ಸದರಿ ನಿಗಮದ ಕಾರ್ಯಚಟುವಟಿಕೆಗಳನ್ನು ತೀವ್ರಗತಿಯಲ್ಲಿ ಅಭಿವೃದ್ಧಿ ಪಡಿಸಲು ನಬಾರ್ಡ್‌ನಿಂದ 115 ಲಕ್ಷ ರೂಪಾಯಿಗಳನ್ನು ಸಾಲ ಸೌಲಭ್ಯ ಪಡೆಯಲು ತೀರ್ಮಾನಿಸಲಾಗಿದ್ದು ಈ ದಿಸೆಯಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ನಿಯಮವನ್ನು 1973ರ ಅಡಿಯಲ್ಲಿ ಸ್ಥಾಪಿತವಾದ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಮಂಡಲಿಯನ್ನು ಕಂಪನಿಗಳ ಅಧಿನಿಯಮದ ಅಡಿಯಲ್ಲಿ ನೋಂದಾಯಿತ ಕಂಪನಿ. ಇದನ್ನು ನಿಗಮವನ್ನಾಗಿ ಪರಿವರ್ತಿಸುವುದು ಸೂಕ್ತವೆಂದು ಪರಿಗಣಿಸಲಾಗಿದೆ. ಇದರಿಂದ ಮೊದಲು ಮಂಡಲಿ ಎಂದು ಇತ್ತು ಮಂಡಲಿ ಅಂತ ಇದ್ದರೆ ಸರ್ಕಾರದ ಅನುದಾನದ ಮೇಲೆಯೇ ಅದು ಅವಲಂಬಿಸಬೇಕಾಗಿದೆ ಆದರೆ ನಾವು ಕಾರ್ಪೊರೇಷನ್ ಮಾಡಿದರೆ ನಿಗಮಗಳನ್ನು ಮಾಡಿದರೆ ನಾವು ನಬಾರ್ಡ್ ಮತ್ತು ಬೇರೆ ಬೇರೆ ಬ್ಯಾಂಕ್‌ಗಳಿಂದ ಸಾಲಗಳನ್ನು ತೆಗೆದುಕೊಂಡು ಅಭಿವೃದ್ಧಿ ಮಾಡುವುದಕ್ಕೆ ಅನುಕೂಲವಾಗುತ್ತದೆ, ಆದ್ದರಿಂದ ಈ ವಿಧೇಯಕವನ್ನು ಮಂಡಿಸುತ್ತಿದ್ದೇವೆ. ಮಂಡಲಿ ಎಂದು ಇದ್ದರೆ ಇದಕ್ಕೆ ಲಿಮಿಟ್ ಇರುತ್ತದೆ. ಸರ್ಕಾರದ ಅನುದಾನದ ಮೇಲೆಯೇ ಈ ಮಂಡಲಿ ಅವಲಂಬಿತವಾಗುತ್ತದೆ. ಇದನ್ನು ಕಾರ್ಪೊರೇಷನ್ ಎಂದು ಮಾಡಿದರೆ ಅದಕ್ಕೆ ವೈಡರ್ ಸ್ಕೋಪ್ ಇರುತ್ತದೆ. ಅಭಿವೃದ್ಧಿ ಮಾಡಲಿಕ್ಕೆ ಆಗುತ್ತದೆ. ನಮ್ಮ ಕಾರ್ಯಕ್ರಮಗಳನ್ನು ನೆರವೇರಿಸಲು ಅನುಕೂಲವಾಗುತ್ತದೆ. ಆರ್ಥಿಕವಾಗಿ ಇದು ಪ್ರಭಲವಾಗಿ ಬೆಳೆಯಲು ಅನುಕೂಲವಾಗುತ್ತದೆ.

+ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ): ಮಾನ್ಯ ಅಧ್ಯಕ್ಷರೇ, ಇದು ಪಶುಸಂಗೋಪನಾ ಇಲಾಖೆಯಲ್ಲಿ ಸೇರಿರತಕ್ಕಂಥಾದ್ದು. ಮೊದಲು ಬಜೆಟ್ ಅಡಿಯಲ್ಲಿ. ಇದನ್ನು ನಮ್ಮ ಸರ್ಕಾರವಿದ್ದಾಗ ನಾವು ಪ್ರತ್ಯೇಕವಾಗಿ ಇದಕ್ಕೆ ಬೇರೆ ಬಜೆಟ್ ಪ್ರಾವಿಜನ್ ಮಾಡಿ ನೇರವಾಗಿ ಕುರಿ ಮತ್ತು ಕುರಿ ಅಭಿವೃದ್ಧಿ ಮಂಡಲಿಗೆ ಹೋಗುವಂತಹ ಕೆಲಸವನ್ನು ಮಾಡಿದಾಗ ಅದು ಬೋರ್ಡ್ ಆಗಿ ಪರಿವರ್ತನೆಯಾಗಿ ನಡೆದುಕೊಂಡು ಬರುತ್ತಿತ್ತು. ಮಂಡಲಿ ಆಗ ಕೆಲಸ ಮಾಡುತ್ತಿದ್ದಂತಾದ್ದು, ಈಗ ಅದನ್ನು ಕಾರ್ಪೊರೇಷನ್ ಅಥವಾ ನಿಗಮ ಅಂತ ಮಾಡಿ ಅದರ ಮೂಲಕ ಹೆಚ್ಚು ಹಣವನ್ನು ಪಡೆಯಬಹುದು, ಆರ್ಥಿಕವಾಗಿ ಪ್ರಬಲ ಮಾಡಬಹುದು, ಫಂಡಿಂಗ್ ಎಜನ್ಸೀಸ್ ಮೂಲಕ ಹಣ ಪಡೆಯಬಹುದು, ಆ ರೀತಿ ಆರ್ಥಿಕವಾಗಿ ಇದು ಶಕ್ತಿ ಪಡೆಯುವಂತಾದ್ದು, ಎಷ್ಟು ಹಣ ಪಡೆಯುವಂತಾದ್ದು, ಮೊದಲು ಬೋರ್ಡ್ ಆಗಿದ್ದಾಗ ಅದರ ವ್ಯಾಪ್ತಿ ಏನು ಇತ್ತು, ಮತ್ತು ಈಗ ಕಾರ್ಪೊರೇಷನ್ ಆಗುವುದರಿಂದ ಎನು ವ್ಯಾಪ್ತಿ ಬರುತ್ತದೆ, ಅದನ್ನು ತಮಗೆ ಆರ್ಥಿಕವಾಗಿ ಶಕ್ತಿ ಬರುವುದರಿಂದ ಈ ಮಂಡಲಿಗೆ ಅದರಿಂದ ಪೂರಕವಾಗಿ ಏನು ಲಾಭವಾಗುತ್ತದೆ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕೆ.ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೇ, ಬೋರ್ಡ್ ಇಟ್ಟುಕೊಂಡೇ ಅದರಿಂದಲೇ ನಾವು ಸಾಲ ಪಡೆಯಲು ಸಾಧ್ಯವಾಗುತ್ತಿರಲಿಲ್ಲವೇ? ಈಗ ಇರುವ ಅನೇಕ ಕಾರ್ಪೊರೇಷನ್ಸ್ ಮತ್ತು ನಿಗಮಗಳು ವೈಂಡ್ ಅಪ್ ಮಾಡಲಿಕ್ಕೆ ಕ್ಲೋಜ್ ಮಾಡಲಿಕ್ಕೆ ಬಂದಿದೆ. ಪುನಃ ಇನ್ನೊಂದು ಕಾರ್ಪೊರೇಷನ್ ಮಾಡಿ ಅದಕ್ಕೆ ಒಬ್ಬರು ಅಧ್ಯಕ್ಷರು, ಸದಸ್ಯರನ್ನು ಮಾಡಿ ಅದಕ್ಕೆ ಇಂತಿಷ್ಟು ಖರ್ಚು ಅಂತ ಮಾಡುವುದಕ್ಕಿಂತ ಇದ್ದ ವ್ಯವಸ್ಥೆಯಲ್ಲಿಯೇ ಅಭಿವೃದ್ಧಿಗೆ ಹಣ ಪಡೆದು ಅದನ್ನು ನಡೆಸುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಂ ಮಹದೇವ್: ಮಾನ್ಯ ಅಧ್ಯಕ್ಷರೇ, ಈಗ ಮಂಡಲಿ ಇದ್ದರೆ ಎನಾಗುತ್ತದೆ, ನಿಗಮ ಮಾಡಿದರೆ ಏನು ಅನುಕೂಲವಾಗುತ್ತದೆ ಎನ್ನುವುದನ್ನು ನಾನು ವಿವರಣೆ ಕೊಡುತ್ತೇನೆ. ಈಗ ಕುರಿ ಅಭಿವೃದ್ಧಿ ಮಂಡಲಿ ಇದ್ದರೆ ಇದು ರಾಜ್ಯ ಶಾಸಕಾಂಗ ಕಾಯ್ದೆಯಡಿಯಲ್ಲಿ ಸ್ಥಾಪನೆಯಾದ ಸಂಸ್ಥೆಗ ಆಗಿದೆ. ಈಗ ಇದನ್ನು ಕುರಿ ಅಭಿವೃದ್ಧಿ ನಿಗಮ ಮಾಡುವುದರಿಂದ ಕೇಂದ್ರ ಸರ್ಕಾರದ ಕಂಪನಿ ಕಾಯ್ದೆಯಡಿ ನೊಂದಾಯಿಸಲ್ಪಟ್ಟ ಸಂಸ್ಥೆಯಾಗುತ್ತದೆ. ಸಂಪೂರ್ಣವಾಗಿ ಇದು ಕುರಿ ಅಭಿವೃದ್ಧಿ ಮಂಡಲಿ ಸಂಪೂರ್ಣವಾಗಿ ಈಗ ಸರ್ಕಾರದ ಅನುದಾನದಿಂದ ಅವಲಂಭಿತವಾದ ಸಂಸ್ಥೆಯಾಗಿದೆ. ಈಗ ಇದನ್ನು ನಿಗಮ ಅಂತ ಮಾಡುವುದರಿಂದ ಸರ್ಕಾರದ ನತಿಯಿಂತ ಮಾಡಲ್ಪಟ್ಟಿರುವ ಪ್ರಾರಂಭಿಕಬೀಜಧನದೊಂದಿಗೆ ವ್ಯವಹರಿಸುವ ಸ್ವಾಯತ್ತತೆ ಸಂಸ್ಥೆಯಾಗುತ್ತದೆ. ಈಗ ಸಂಪೂರ್ಣ ಸೇವಾ ಮನೋಭಾವನೆಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಸ್ಥೆಯಾಗಿದೆ ಕುರಿ ಅಭಿವೃದ್ಧಿ ನಿಗಮವಾಗುವುದರಿಂದ ಸಂಪೂರ್ಣವಾಗಿ ವ್ಯಾವಹಾರಿಕವಾಗಿ, ಲಾಭದಾಯಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ವಾಣಿಜ್ಯ ಸಂಸ್ಥೆಯಾಗುತ್ತದೆ ಮತ್ತು ಷೇರು ಮತ್ತು ಡಿಬೆಂಚರ್ ಮೂಲಕ ಬಂಡವಾಳವನ್ನು ಪಡೆಯಲು ಈಗ ಸಾಧ್ಯವಿಲ್ಲ. ನಿಗಮ ಮಾಡುವುದರಿಂದ ಕುರಿ ಅಭಿವೃದ್ಧಿ ನಿಗಮ ಮಾಡಿರುವುದರಿಂದ ಷೇರು ಮತ್ತು ಡಿಬೆಂಚರ್‌ಗಳ ಮೂಲಕ ಬಂಡವಾಳವನ್ನು ಪಡೆಯಬಹುದಾಗಿದೆ. ಈಗ ಖಾಸಗಿ ಸಂಸ್ಥೆಗಳಿಂದ ಸಾಲಸೌಲಭ್ಯ ಪಡೆಯುವ ಅವಕಾಶವಿಲ್ಲ. ಈಗ ನಾವು ನಿಗಮ ಮಾಡಿರುವುದರಿಂದ ನಿರ್ವಹಣೆಯಲ್ಲಿ ಖಾಸಗಿ ಸಂಸ್ಥೆಗಳು ಮತ್ತು ಇತರೆ ಕಡೆಗಳಿಂದ ಸಾಲ ಸೌಲಭ್ಯಗಳನ್ನು ಪಡೆಯಬಹುದು. ಮಂಡಲಿಯ ಅಧಿಕಾರ ಸೀಮಿತವಾಗಿದೆ. ಈಗ ಇದನ್ನು ನಿಗಮ ಮಾಡುವುದರಿಂದ ಹೆಚ್ಚಿನ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ. ಈ ಕಾರಣಗಳಿಂದ ನಾವು ನಿಗಮ ಮಾಡಲಿಕ್ಕೆ ಬಯಸಿದ್ದೇವೆ.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು): ಮಾನ್ಯ ಅಧ್ಯಕ್ಷರೇ, ಈಗ ಇದನ್ನು ನಿಗಮವನ್ನಾಗಿ ಪರಿವರ್ತನೆ ಮಾಡುವುದರಿಂದ ಕಂಪನಿಯ ಕಾಯ್ದೆ ಅಡಿಯಲ್ಲಿ, ಇದಕ್ಕೆ ಹಣಕಾಸಿನ ನೆರವನ್ನು ಪಡೆಯಬಹುದು ಅಂತ ಹೇಳುತ್ತಿದ್ದೀರಿ, ಈ ಹಿಂದೆ ಮಂಡಲಿ ಇರುವಂತಹ ಸಂದರ್ಭದಲ್ಲಿ ಅದರ ವ್ಯಾಪ್ತಿ ಏನು ಇತ್ತು? ಈಗ ಹೊಸದಾಗಿ ನಿಗಮ ಮಾಡುವುದರಿಂದ ನಿಮ್ಮ ಪ್ರಸ್ತಾವನೆಗಳು ಏನು? ಇದನ್ನು ಮುಂದೆ ಯಾವ ರೀತಿಯಲ್ಲಿ ನಡೆಸಬೇಕು ಎನ್ನುವಂತಹ ಹಾದಿಯಲ್ಲಿ ಇದ್ದೀರಿ? ಕೇವಲ ಇದನ್ನು ಮಂಡಲಿಯಿಂದ ನಿಗಮ ಮಾಡುವುದು ಅಷ್ಟೇನಾ ಅಥವಾ ಇದಕ್ಕೆ ನಿಮ್ಮ ಯೋಜನೆಗಳು ಏನು?

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಎಲ್ಲಾ ವಿವರಗಳನ್ನು ಕೊಟ್ಟಿದ್ದೇನೆ. ನಿಗಮ ಮಾಡಿದ ಮೇಲೆ ಅದನ್ನು ಆರ್ಥಿಕವಾಗಿ ಬಲಯುತವಾಗಿ ಮಾಡಬೇಕು,

ಬಡ ಜನರಿಗೆ ಅನುಕೂಲ ಮಾಡಿಕೊಡಬೇಕು, ಈಗ ಮಂಡಲಿ ಇರುವುದರಿಂದ ಲಿಮಿಟೆಡ್‌ನಲ್ಲಿದೆ, ಅಂತ ಹೇಳಿದೆ.

ಶ್ರೀ ಡಿ.ವಿ. ಸದಾನಂದಗೌಡ: ನಾನು ಅದನ್ನಲ್ಲ ಕೇಳಿದ್ದು, ನಮಗೆ ಒಂದು ಮುಂದಾಲೋಚನೆ ಇರಬೇಕು. ಮುಂದಿನ ದಿನಗಳಲ್ಲಿ ನಾವು ಇದನ್ನು ಮಂಡಲಿಯಿಂದ ನಿಗಮವನ್ನಾಗಿ ಪರಿವರ್ತನೆ ಮಾಡಿದಾಗ ನಮ್ಮಲ್ಲಿ ಒಂದು ಆಲೋಚನೆ ಇರಬೇಕು. ಅದಕ್ಕೆ ಇಷ್ಟು ಫಂಡಿಂಗ್ಸ್ ಮಾಡಿದ್ದೇವೆ, ಅದಕ್ಕೆ ಇಂತಹ ಯೋಜನೆಗಳನ್ನು ಮಾಡುತ್ತೇವೆ ಎನ್ನುವ ಭಾವನೆಗಳು ಇರಬೇಕಲ್ಲಾ. ಆ ರೀತಿ ನಿಮ್ಮ ಮನಸ್ಸಿನಲ್ಲಿ ಏನಿದೆ? ಮಂಡಲಿಯಿಂದ ನಿಗಮ ಮಾಡಬೇಕೆನ್ನುವ ಆಲೋಚನೆ ಇರುವಾಗ ಏನಾದರೂ ಇರಬೇಕಲ್ಲಾ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ ಈಗ...

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಿಗೆ ಗೊತ್ತು. ಮೊದಲು ಇದಕ್ಕೆ ಹಣಕಾಸಿನ ವ್ಯವಸ್ಥೆ ಒಂದೂವರೆ ಕೋಟಿ ರೂಪಾಯಿಗಳು ಇದ್ದದ್ದು ಮಾನ್ಯ ಸಚಿವರು ಈ ಖಾತೆಯನ್ನು ವಹಿಸಿಕೊಂಡ ಮೇಲೆ 65 ಅಥವಾ 85 ಲಕ್ಷರೂ.ಗಳಿಗೆ ವಾಪಸ್ಸು ಬಂದಿದೆ. ಅಂದರೆ ಅಲ್ಲಿ ಬರುವಂತಹ ಸಿಬ್ಬಂದಿಗೂ ಮತ್ತು ಬರುವ ಖರ್ಚಿಗೂ ಸರಿಯಾಗಿದೆ. ಇದು ಬಿಟ್ಟರೆ ಮಂಡಲಿಯಲ್ಲಿ ಬೇರೆ ಏನೂ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಬೇರೆ ಎಲ್ಲಿಯಾದರೂ ಸಾಲ ತಂದು ಅಭಿವೃದ್ಧಿ ಮಾಡುತ್ತೇವೆಂದು ಮಾಡಿರಬಹುದು, ಅದಕ್ಕೆ ಯಾರೋ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿ ಮಾಡಬೇಕೆಂದು ಇರಬಹುದು. ಮಾನ್ಯ ಉಪಾಧ್ಯಕ್ಷರೇ, ತಮ್ಮ ಕ್ಷೇತ್ರದಲ್ಲಿ ಮತ್ತು ರಾಣೆಬೆನ್ನೂರು ಈ ಕಡೆ ಕುರಿ ಅಭಿವೃದ್ಧಿ ಹೆಚ್ಚು ಇದೆ. ಮತ್ತು ಇದನ್ನು ಆರ್ಥಿಕವಾಗಿ ಏನಾದರೂ ಬಲಪಡಿಸಬೇಕೆನ್ನುವ ಉದ್ದೇಶದಿಂದ ಮತ್ತು ಅಲ್ಲಿರುವ ಈಗ ಹಾಲಿ ಅಧ್ಯಕ್ಷರು ಮತ್ತು ಸಿಬ್ಬಂದಿಗೆ ಸಂಬಳ ಸಾರಿಗೆ ಕೊಡುವುದಕ್ಕೆ ದುಡ್ಡು ಇಲ್ಲ, ನಿಮ್ಮ ಸರ್ಕಾರ ಬಂದ ಮೇಲೆ ಒಂದೂವರೆ ಕೋಟಿ ರೂಪಾಯಿಗಳ ಅನುದಾನ ಇದ್ದದ್ದು ಈಗ 65 ಅಥವಾ 85 ಲಕ್ಷರೂ.ಗಳಿಗೆ ಇಳಿದಿದೆ. ತಮ್ಮಲ್ಲಿ ಅಂಕಿಅಂಶ ಇರಬಹುದು.

ಶ್ರೀ ಎಸ್. ಎಸ್. ಪಾಟೀಲ್: ಏನೂ ಹಣ ಇಲ್ಲ. ಮಂಡಲಿ ಹೆಸರಿಗೆ ಮಾತ್ರ ಇದೆ.

ಶ್ರೀ ಎಂ. ಮಹದೇವ್: 6 ಕೋಟಿ ರೂಪಾಯಿ ಹಣ ಇದೆ.

ಶ್ರೀ ಬಿ.ಎನ್ ಬಚ್ಚೇಗೌಡ: 6 ಕೋಟಿ ರೂ ಎಲ್ಲಿ ಬರುತ್ತದೆ? ಅಲ್ಲಿ ಔಷಧಿಗಳಿಗೆ 3 ಕೋಟಿ ರೂ. ಹಣ ಇಲ್ಲ. ಇನ್ನು 6 ಕೋಟಿ ರೂ ಎಲ್ಲಿ ಬರುತ್ತದೆ?

ಶ್ರೀ ಎಂ. ಮಹದೇವ್: ಅದಕ್ಕೆ ತಾವು ದಯವಿಟ್ಟು ಒಪ್ಪಿಗೆ ಕೊಡಿ.

ಶ್ರೀ ಎಸ್. ಎಸ್. ಪಾಟೀಲ್ (ಮುಂಡರಗಿ): ಈಗ ನಮ್ಮ ಕಡೆ ಒಂದು ಗಾದೆ ಇದೆ. ಅಳಿಯ ಅಲ್ಲ ಮಗಳ ಗಂಡ ಅಂತ. ಅದನ್ನು ಮಾಡುವುದಕ್ಕೆ ಹೊರಟಿದ್ದೀರಿ ಅಷ್ಟೇ, ಅದು ಇದ್ದರೂ ಏನೂ ತೊಂದರೆ ಇಲ್ಲ. ಹೊಸದಾಗಿ ಮಾಡುವುದರಿಂದ ಎನೂ ಭಾರಿ ಅನುಕೂಲವಾಗುವುದಿಲ್ಲ. ಈಗ ಇರುವುದಕ್ಕೆ ಬಜೆಟ್‌ನಲ್ಲಿ ದುಡ್ಡು ಕೊಡಿ. ಅದಕ್ಕೆ ಒಬ್ಬ ಅಧ್ಯಕ್ಷರನ್ನು ಮಾಡಿದ್ದೀರಿ, ಅವರಿಗೆ ಒಂದು ಗೂಟದ ಕಾರು ಕೊಟ್ಟಿದ್ದೀರಿ. ಅದಕ್ಕೆ ಡೀಸೆಲ್ ಇಲ್ಲದೆ ಸುಮ್ಮನೆ ನಿಂತಿರುತ್ತದೆ. ಇಂತಹ ಪರಿಸ್ಥಿತಿಯನ್ನು ಇಟ್ಟಿದ್ದೀರಿ. ಆದ್ದರಿಂದ ಅದನ್ನು ಏಕೆ ಮಾಡಬೇಕು? ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕುರಿ ಇವೆ. ಒಂದು ಅಭಿವೃದ್ಧಿ

ಮಂಡಲಿ ಮಾಡಿದ್ದಾರೆ. ಅದಕ್ಕೆ ಸಾಕಷ್ಟು ಹಣಕಾಸಿನ ನೆರವು ಒದಗಿಸಿ. ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿ ಕೊಡಿ. ನೀವು ಕಾರ್ಪೊರೇಷನ್ ಮಾಡಿ ಎಲ್ಲಿಯಾದರೂ ಸಾಲ ತಂದು, ಮುಂದೆ ಅದನ್ನು ಸರ್ಕಾರವೇ ತುಂಬಬೇಕು, ಆ ಸಾಲವನ್ನು ಅವರು ಎಲ್ಲಿಂದ ತುಂಬುತ್ತಾರೆ? ಈಗ ತಾವು ಮಾಡಿರುವ ಕಾರ್ಪೊರೇಷನ್ ನಿಗಮಗಳನ್ನು ನೋಡಿದ್ದೇವೆಯಲ್ಲಾ. ಈಗ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್, ಅದರ ಹಣ ಯಾರು ಕಟ್ಟುವವರು ಸುಮ್ಮನೆ ಸಾಲ ಮಾಡುವುದು. ನನ್ನನ್ನು ಕೇಳಿದರೆ ಈಗಿರುವುದೇ ಸರಿಯಾಗಿದೆ.

ಶ್ರೀ ಹೆಚ್.ಎಸ್. ಮಹದೇವ್: ಕಾರ್ಪೊರೇಷನ್ ಮಾಡುವ ಉದ್ದೇಶ ಕುರಿಗಳನ್ನು ಸಾಲಗಾರರನ್ನಾಗಿ ಮಾಡುವುದಕ್ಕೆ.

ಶ್ರೀ ಎಸ್. ಎಸ್. ಪಾಟೀಲ್: ಮೊನ್ನೆ ಒಂದು ಸಮಾರಂಭಕ್ಕೆ ಮಾನ್ಯ ರೇವಣ್ಣನವರು ಬಂದಿದ್ದರು. ಕುರಿಗಳಿಗೆ ಔಷಧಿಗಳನ್ನು ಹಾಕಲು ನಮ್ಮ ಅಧ್ಯಕ್ಷರು ಕರೆಸಿದರೆ ಅಲ್ಲಿ ಔಷಧಿ ಇಲ್ಲ. ಅವತ್ತು ಜನರು ನಿಮ್ಮ ಎದುರಿಗೇ ಹೊಡೆಯಲಿಕ್ಕೆ ಹೋಗಿದ್ದರೋ ಇಲ್ಲವೋ ತಾವೇ ಹೇಳಿ.

ಶ್ರೀ ಎಂ. ಮಹದೇವ್: ಕುರಿಗಳಿಗೆ ಸಾಕಷ್ಟು ಔಷಧಿಗಳು ಇವೆ. ಔಷಧಿಗಳ ಸರಬರಾಜು ಸಾಕಷ್ಟು ಮಾಡಿದ್ದೇವೆ. ಈಗ ನಿಗಮ ಮಾಡುವುದರಿಂದ ಕುರಿಗಳ ಅಭಿವೃದ್ಧಿ ಆಗುವುದರ ಜೊತೆಯಲ್ಲಿ ರೈತರಿಗೂ ಅನುಕೂಲವಾಗುತ್ತದೆ. ಬಜೆಟ್‌ನಲ್ಲಿ ಮಂಡಲಿಗೆ ಎಷ್ಟು ಹಣ ಕೊಡುವುದಕ್ಕೆ ಆಗುತ್ತದೆ? ಆದ್ದರಿಂದ ಆ ನಿಗಮವನ್ನು ಆರ್ಥಿಕವಾಗಿ ಬಲವಾಗಿ ಮಾಡಿ ಸಹಾಯ ಮಾಡುವುದಕೋಸ್ಕರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಆದ್ದರಿಂದ ದಯವಿಟ್ಟು ಅನುಮೋದನೆ ಮಾಡಿ ಕೊಡಿ.

ಶ್ರೀ ಎಸ್. ಎಸ್. ಪಾಟೀಲ್: ಸಾಲ ತೆಗೆದುಕೊಂಡು ಅಬಿವೃದ್ಧಿ ಮಾಡುವ ಬದಲು ಸರ್ಕಾರದಿಂದ ಹಣ ಕೊಡಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ): ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಂದಿರುವ ವಿಧೇಯಕವನ್ನು ನಾವು ಸ್ವಾಗತ ಮಾಡೋಣ. ಆದರೆ ಮಾನ್ಯ ಸದಾನಂದಗೌಡರು ಕೇಳಿದರಲ್ಲಾ ಮೂಲಭೂತವಾದ ಪ್ರಶ್ನೆ ಈಗ ನೀವು ಏನು ಭಾವನೆ ಇಟ್ಟುಕೊಂಡಿದ್ದೀರಿ ಮತ್ತು ತಮ್ಮ ಮುಂದಿನ ಯೋಜನೆ ಏನು ಎನ್ನುವುದನ್ನೂ ಸಹ ಗೊತ್ತುಪಡಿಸಬೇಕಾಗುತ್ತದೆ. ಈಗ ಕುರಿ ಸಂತತಿಯನ್ನು ಹೆಚ್ಚು ಮಾಡುವಂತಹ ಕೆಲಸ ಮಾಡುತ್ತೀರೋ ಹೇಗೆ ಅಥವಾ ಹೊಸ ಹೊಸ ತಳಿಗಳನ್ನು ಕಂಡು ಹಿಡಿದು ಆಫ್ರಿಕಾ ದೇಶದಿಂದ ತರುವುದಕ್ಕೆ ಏನಾದರೂ ಅಭಿಪ್ರಾಯ ಪಟ್ಟಿದ್ದೀರೋ ಹೇಗೆ? ಇವತ್ತು ನಿಗಮ ಮಾಡುವುದರಿಂದ ನಿಮ್ಮ ಮುಂದಿನ ಯೋಜನೆಗಳೇನು ಮತ್ತು ಭಾವನೆಗಳೇನು ಎಂಬುದನ್ನು ಹೇಳಬೇಕಲ್ಲಾ. ನೀವು ಇದನ್ನು ಹೇಳುತ್ತಲೇ ಇಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಮೇನ್ ಆಕ್ಟ್‌ಗೆ ಏಕೆ ಇದನ್ನು ತಂದಿದ್ದೇವೆಂದರೆ ಕಾರ್ಪೊರೇಷನ್ಸ್‌ಗೆ ಕೆಲವು ಲಿಮಿಟೇಷನ್ಸ್ ಇರುತ್ತವೆ. ಕಂಪನಿ ಎಂದರೆ, ಅದು ಸರ್ಕಾರಿ ಕಂಪನಿ. ಕರ್ನಾಟಕ ಸರ್ಕಾರದ ಕಂಪನಿ. ಇದಕ್ಕೆ ಸ್ವಲ್ಪ ವೈಡರ್ ಸ್ಕೋಪ್ ಸಿಗುತ್ತದೆ. ಕಂಪನಿ ಮತ್ತು ಕಾರ್ಪೊರೇಷನ್‌ಗೆ ಬೇಕಾದಷ್ಟು ವ್ಯತ್ಯಾಸಗಳು ಇವೆ. ಕಾರ್ಪೊರೇಷನ್‌ಗೆ ಇರುವ ನಿರ್ಬಂಧಗಳು ಕಂಪನಿಗೆ ಇರುವುದಿಲ್ಲ. Company can borrow. Company can lend.

ಶ್ರೀ ಎಸ್ ಸುರೇಶ್ ಕುಮಾರ್: ಇವತ್ತು ಗವರ್ನಮೆಂಟ್ ಕಂಪನಿಗಳನ್ನೆಲ್ಲಾ ಡಿಸ್-ಇನ್‌ವೆಸ್ಟ್‌ಮೆಂಟ್ ಮಾಡುತ್ತಿರುವಾಗ, ಇದನ್ನು ಯಾವಾಗ ಡಿಸ್ ಇನ್‌ವೆಸ್ಟ್‌ಮೆಂಟ್ ಮಾಡುತ್ತೀರಿ?

ಶ್ರೀ ಡಿ.ಬಿ. ಚುದ್ರೇಗೌಡ: ಅದು ಎಲ್ಲಿಯವರೆಗೆ ಲಾಭದಾಯಕವಾಗಿ ಕೆಲಸ ಮಾಡುತ್ತಾ ಇರುತ್ತದೋ ಅಲ್ಲಿಯವರೆಗೆ ಅದಕ್ಕೆ ತಾನೇ ರಕ್ಷಣೆ ಒದಗಿಸುತ್ತದೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ಸನ್ಮಾನ್ಯ ಸಚಿವರಲ್ಲಿ ತಮ್ಮನ್ನು ಅಲ್ಲ ಸಾರ್ (ಮಾನ್ಯ ಚಂದ್ರೇಗೌಡ ರನ್ನು ಉದ್ದೇಶಿಸಿ) ತಾವು ಸೇವಿಯರ್ ಅಷ್ಟೆ ನನಗೊಂದು ಕ್ಲಾರಿಷಿಕೇನ್ ಬೇಕು. ಮಂಡಳಿಯನ್ನು ಕಂಪನಿ ಅಥವಾ ನಿಗಮವಾಗಿ ಪರಿವರ್ತಿಸುವ ಯೋಚನೆ ಇದೆ. ಈಗ ಈ ಕ್ಷೇತ್ರದಲ್ಲಿ ಹೇಗೆ ಹಾಲು ಉತ್ಪಾದಕರ ಸಂಘದಲ್ಲಿ ಬೇರೆ ಬೇರೆ ಕಡೆ ಒಕ್ಕೂಟಗಳು ಇವೆ ಹಾಗೆಯೇ ಕುರಿ ಅಭಿವೃದ್ಧಿ ಮಂಡಳಿಯಲ್ಲೂ ಕೂಡ ತಾಲ್ಲೂಕು, ಜಿಲ್ಲೆ ಮತ್ತು ಗ್ರಾಮದಲ್ಲಿ ಇವತ್ತು ಈ ಒಕ್ಕೂಟಗಳು ಇವೆ. ಅವು ಕೆಲಸ ಮಾಡುತ್ತಾ ಇವೆ. ಈ ಬೋರ್ಡ್ ನಿಗಮವಾಗಿ ಅಥವಾ ಕಂಪನಿಯಾಗಿ ಪರಿವರ್ತನೆಯಾದ ಮೇಲೆ ಅವುಗಳ ಅಸ್ತಿತ್ವ ಹೇಗಿರುತ್ತದೆ? ಅವುಗಳ ಹಣೆಬರಹ ಏನಾಗುತ್ತದೆಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ಮಹದೇವ್: ಕಂಪನಿ ಆಕ್ಟ್ ಬಂದಮೇಲೆ, ಅದರಡಿಯಲ್ಲಿ ನಾವು ಅಭಿವೃದ್ಧಿಯನ್ನು ಮಾಡುತ್ತೇವೆಯೇ ಹೊರತು, ಈ ಒಕ್ಕೂಟಗಳ ಬಗ್ಗೆ ಏನು ಮಾಡಬೇಕು, ಯಾವ ತರಹ ಮಾಡಬೇಕು ಎನ್ನುವುದರ ಬಗ್ಗೆ ಆಮೇಲೆ ನಾವು ನಿರ್ಧಾರ ಕೈಗೊಳ್ಳುತ್ತೇವೆ. ಆ ಬಗ್ಗೆ ಪರಿಶೀಲನೆ ಮಾಡಿ, ಮಾಡುತ್ತೇವೆ. ಈಗ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ಆರ್ಥಿಕ ಸಂಪನ್ಮೂಲಗಳನ್ನು ಬೇರೆ ಕಡೆಯಿಂದ ಕ್ರೋಢೀಕರಿಸಬೇಕಾಗುತ್ತದೆ. ಅದು ಮಾಡಲಿಲ್ಲವೆಂದರೆ, ಏನೂ ಮಾಡಲಿಕ್ಕಾಗುವುದಿಲ್ಲ.

ಶ್ರೀ ಎಸ್. ಎಸ್. ಪಾಟೀಲ್: ಹಾಲಿ ಇರತಕ್ಕ ಮಂಡಳಿಗೇ ದುಡ್ಡು ಕೊಟ್ಟು ಅಭಿವೃದ್ಧಿ ಮಾಡಿ, ಸುಮ್ಮನೆ ಹೆಸರು ಇಟ್ಟುಕೊಂಡು, ಅದಕ್ಕೆ ಒಬ್ಬರು ಅಧ್ಯಕ್ಷರನ್ನು ಮಾಡುತ್ತೀರಿ ಅದನ್ನು ಮುಚ್ಚಿಬಿಡಿ.

ಶ್ರೀ ಡಿ.ಎ. ಸದಾನಂದಗೌಡ: ಮಾನ್ಯ ಸುರೇಶ್ ಕುಮಾರ್ ಕೇಳಿದ್ದಕ್ಕೆ ತಾವು ಉತ್ತರ ಕೊಟ್ಟಿಲ್ಲ; ಕೊಡಬೇಕು. ಏತಕ್ಕೆಂದರೆ, ಈಗ ಆ ಹಂತದಲ್ಲಿರುವಂಥ ಬೇರೆ ಬೇರೆ ಒಕ್ಕೂಟಗಳು, ತಾಲ್ಲೂಕು ಮಟ್ಟ ಮತ್ತು ಕೆಳಗಿನ ಮಟ್ಟದಲ್ಲಿ ಒಕ್ಕೂಟಗಳಿವೆಯಲ್ಲಾ. ನೀವು ಇದನ್ನು ಕಂಪನಿ ಅಥವಾ ನಿಗಮವಾಗಿ ಪರಿವರ್ತನೆ ಮಾಡಿದರೆ, ಅವುಗಳ ಸಾಧಕ ಬಾಧಕಗಳೇನು ಎಂಬುದನ್ನು ತಾವು ಹೇಳಬೇಕಲ್ಲಾ. ಅವುಗಳ ಬಗ್ಗೆ ನಾಳೆ ನೋಡುತ್ತೇವೆಂದು ಹೇಳಿ, ತೊಂದರೆ ಮಾಡುವ ಬದಲು ಈಗ ನಿಮ್ಮ ಅಭಿಪ್ರಾಯಗಳೇನು ನೀವು ಪರಿವರ್ತನೆ ಮಾಡತಕ್ಕ ಸಂದರ್ಭದಲ್ಲಿ ಇದನ್ನು ಯೋಚನೆ ಮಾಡಿದ್ದೀರಾ?

ಶ್ರೀ ಎಂ. ಮಹದೇವ್: ಎಷ್ಟೋ ಕೆಲಸ ಮಾಡುತ್ತಾ ಇಲ್ಲ. ಇರತಕ್ಕ ಒಕ್ಕೂಟಗಳನ್ನು ಯಾವರೀತಿ ಮಾಡಬೇಕು, ಈ ಕಂಪನಿ ಆಕ್ಟ್ ಅಡಿಯಲ್ಲಿ ಯಾವರೀತಿ ತರಬೇಕು ಯಾವರೀತಿ ಸೌಲಭ್ಯಗಳನ್ನು ಮಾಡಿಕೊಡಬೇಕು, ಯಾವರೀತಿ ಆರ್ಥಿಕ ನೆರವನ್ನು ಕೊಡಬೇಕು, ಇದರ ಬಗ್ಗೆ ನಾವು ಎಲ್ಲಾ ಮಾಡುತ್ತೇವೆ.

ಶ್ರೀ ಡಿ.ಎ. **ಸದಾನಂದಗೌಡ:** ಯಾವುದೇ ಒಂದು ತಿದ್ದುಪಡಿ ಮಾಡುವಂಥ ಸಂದರ್ಭದಲ್ಲಿ, ಅದರ ಮುಂದಿನ ಸಾಧಕ ಬಾಧಕಗಳ ಬಗ್ಗೆ ನೀವು ಮಾಹಿತಿಯನ್ನು ಕೊಡಬೇಕಲ್ಲಾ. ಈಗ ಒಕ್ಕೂಟಗಳ ಅಸ್ತಿತ್ವವನ್ನೇ ನಾಳೆ ಒಂದುರೀತಿಯಲ್ಲಿ ಪ್ರಶ್ನೆ ಮಾಡುವಂಥ ಸಂದರ್ಭಗಳು ಈ ಕಂಪನಿ ಅಥವಾ ನಿಗಮದಿಂದ ಬರಬಹುದು...

ಶ್ರೀ ಎಂ. **ಮಹದೇವ್:** ಎಷ್ಟೋ ಒಕ್ಕೂಟಗಳು ಇವತ್ತು ಡೀಫಂಕ್ಟ್ ಆಗಿವೆ. ಈ ರೀತಿ ಕೆಲಸ ಮಾಡದೇ ಇರತಕ್ಕ ಒಕ್ಕೂಟಗಳಿಗೆ ಒಂದು ಚೇತನವನ್ನು ಕೊಡಬೇಕಾಗುತ್ತದೆ. ಯಾವರೀತಿ ಕೊಡಬೇಕು, ಹೇಗೆ ಮಾಡಬೇಕು ಎಂಬುದರ ಬಗ್ಗೆ ಕಂಪನಿ ಆಕ್ಟ್ ಬಂದಮೇಲೆ ನಾವು ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎಸ್. ಎಸ್. **ಪಾಟೀಲ್:** ನೀವು ಯೋಚನೆ ಮಾಡಿ ಬಜೆಟ್ ಮಾಡುತ್ತೀರೋ ಅಥವಾ ಬಜೆಟ್ ಮಾಡಿ ಯೋಚನೆ ಮಾಡುತ್ತೀರೋ? ಇದೆಲ್ಲಾ ಸುಮ್ಮನೆ, ಇರುವುದಕ್ಕೇ ನೀವು ದುಡ್ಡು ಕೊಡಿ. ಇರತಕ್ಕದ್ದೇ ಸರಿಯಾಗಿರಲಿ. ಈಗ ಏನು ಬೇಕಾಗಿದೆ, ಈ ರಾಜ್ಯದಲ್ಲಿ ಕುರಿ ಅಭಿವೃದ್ಧಿಯಾಗಬೇಕಾಗಿದೆ. ಅವರಿಗೆ ಸವಲತ್ತು ಕೊಡಬೇಕಾಗಿದೆ.

ಶ್ರೀ ಎಂ. **ಮಹದೇವ್:** ಅಭಿವೃದ್ಧಿ ಮಾಡಲಿಕ್ಕೆ ದುಡ್ಡಿಲ್ಲದೇ ಇರತಕ್ಕ ಪರಿಸ್ಥಿತಿಗೋಸ್ಕರ ಈ ಕಾರ್ಪೊರೇಷನ್‌ನ್ನು ನಿಗಮ ಮಾಡುತ್ತಿದ್ದೇವೆ. ಬೇರೆ ಬೇರೆ ಕಡೆಗಳಲ್ಲಿ ಈಗ ಕಾರ್ಪೊರೇಷನ್‌ಗಳು ಇವೆಯಲ್ಲಾ, ಆದ್ದರಿಂದ ಇದನ್ನೂ ಒಂದು ಸ್ವತಂತ್ರವಾದ ಸಂಸ್ಥೆಯನ್ನು ಮಾಡೋಣವೆಂದು, ನಾವು ಮಾಡಿದ್ದೇವೆ.

ಶ್ರೀ ಎಸ್.ಪಿ.**ಮುದ್ದಹನುಮೇಗೌಡ (ಕುಣಿಗಲ್):** ನನಗೊಂದು ಅನುಮಾನ ಏನೆಂದರೆ, ಮಂತ್ರಿಗಳು ಯಾವುದೋ ಒಂದು ಉದ್ದೇಶ ಇಟ್ಟುಕೊಂಡು, ಇದನ್ನು ಮಾಡಬೇಕೆಂದು ಹೊರಟಿದ್ದಾರೆ. ಹಾಲಿ ಇರತಕ್ಕ ಸೊಸೈಟಿಗಳ ಪೊಸಿಷನ್ ಏನು, ನಾಳೆ ಯಾವರೀತಿ ಅವರ ಇಂಟ್ರೆಸ್ಟ್‌ನ್ನು ಸೇಫ್‌ಗಾರ್ಡ್ ಮಾಡುತ್ತೀರಿ? ಈಗ ಅವರೇನು ಬೈಲಾಸ್ ಮಾಡಿಕೊಂಡು ಕಾರ್ಯಚಟುವಟಿಕೆಗಳನ್ನು ನಡೆಯುತ್ತಿದ್ದಾರೆ, ನಾಳೆ ಆ ಸಂಘಗಳ ಪರಿಸ್ಥಿತಿ ಏನಾಗುತ್ತೇ? How the government is going to safeguard the interest of the societies which are already existing?

ಶ್ರೀ ಎಸ್.ಎಸ್. **ಪಾಟೀಲ್:** ಆಕ್ಟ್ ಪ್ರಕಾರ ಅವು ರಿಜಿಸ್ಟ್ರೇಷನ್ ಆಗಿವೆ. ಆ ಸೊಸೈಟಿಗಳಿಗೆ ಸಾಲ ತೆಗೆದುಕೊಳ್ಳುವುದಕ್ಕೆ ಪ್ರಾವಿಷನ್ ಇದೆ. ಇಲ್ಲೇಕೆ ಮತ್ತೊಂದು ಸುಮ್ಮಸುಮ್ಮನೆ ಮಾಡುತ್ತೀರಿ. ಅದೇ ಸೊಸೈಟಿಗೆ ಎನ್ ಸಿ ಡಿ ಸಿ ಯಿಂದ ಸಾಲ ಸಿಗುತ್ತದೆ, ಗವರ್ನಮೆಂಟ್‌ನಿಂದ ಸಿಗುತ್ತದೆ, ಬ್ಯಾಂಕುಗಳಿಂದ ಸಿಗುತ್ತದೆ, ಅಲ್ಲಿ ಸದಸ್ಯರು ಇರುತ್ತಾರೆ.

ಶ್ರೀ ಎಂ. **ಮಹದೇವ್:** ನಿಗಮ ಅಸ್ತಿತ್ವಕ್ಕೆ ಬಂದಮೇಲೆ, ಅದಕ್ಕೆ ಯಾವರೀತಿ ಅನುಕೂಲ ಮಾಡಿಕೊಡಬೇಕೆಂಬ ಬಗ್ಗೆ ಆ ಕಾರ್ಪೊರೇಷನ್ ಅಡಿಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಪಿ. **ಮುದ್ದಹನುಮೇಗೌಡ:** ನೀವು ಮುಂದೆ ಏನು ಮಾಡಬೇಕೆಂಬ ಬಗ್ಗೆ ಒಳ್ಳೆಯ ದೃಷ್ಟಿ ಇಟ್ಟುಕೊಂಡಿದ್ದೀರೆಂದೇ ನಮ್ಮ ಭಾವನೆ ಇದೆ. ಸರ್ಕಾರ, ಇವತ್ತು ಈ ಸಹಕಾರ ಸಂಘಗಳಲ್ಲಿ ತೊಡಗಿಸಿಕೊಂಡಿರತಕ್ಕ ಬಡವರ ಬಗ್ಗೆ ಅಥವಾ ನಮ್ಮ ರೈತರೇನಿದ್ದಾರೆ ಅವರ ಹಿತಾಸಕ್ತಿಯನ್ನು ಕಾಪಾಡುತ್ತೀರಿ ಎಂಬ ನಂಬಿಕೆ ನಮಗಿದೆ. ಆದರೆ, ಯಾವರೀತಿ ಕಾಪಾಡುತ್ತೀರಿ

ಎಂಬುದನ್ನು ನಮ್ಮ ಮುಂದೆ ಇಡಬೇಕಲ್ಲಾ. ನಮಗೆ ನಂಬಿಕೆ ಬರಬೇಕು. ಹಾಲಿ ಕಾರ್ಯ ನಿರ್ವಹಿಸತಕ್ಕ ಸಂಘಗಳೇನಿವೆ, ಅವರಿಗೆ ನೀವು ಇಲ್ಲಿಂದ ಒಂದು ಮಾಹಿತಿ ಕೊಡಬೇಕು. ನಿಮ್ಮ ಹಿತಾಸಕ್ತಿಯನ್ನು ನಾವು ಈ ರೀತಿ ಕಾಪಾಡುತ್ತೇವೆ, ಈ ತರಹ ಬದಲಾವಣೆ ತರುವುದರಿಂದ ನಿಮಗೆ ಯಾವರೀತಿಯ ತೊಂದರೆಯೂ ಆಗುವುದಿಲ್ಲ ಅನ್ನುವುದರ ಬಗ್ಗೆ ಸಂದೇಶ ಹೋಗಬೇಕಲ್ಲಾ.

ಶ್ರೀ ಎಸ್.ಎಸ್. ಪಾಟೀಲ್: ಈಗಾಗಲೇ ಅದರ ಫೆಡರೇಷನ್ ಕೂಡ ಇದೆ. ಆದ್ದರಿಂದ ಇದರ ಅವಶ್ಯ ಇಲ್ಲ, ಕಾರ್ಪೊರೇಷನ್ ಅವಶ್ಯ ಇಲ್ಲ, ಬೋರ್ಡ್ ಅವಶ್ಯ ಇಲ್ಲ, ಆ ಫೆಡರೇಷನ್ನಿಗೇ ಸಹಾಯ ಮಾಡಿ. ಅವರಿಗೆ ಎಲ್ಲಾ ರೀತಿಯ ಶಕ್ತಿಯನ್ನು ಕೊಡಿ.

ಶ್ರೀ ಎಂ. ಮಹದೇವ್: ಅವರಿಗೆ ಸಹಾಯ ಮಾಡತಕ್ಕ ಸಂಸ್ಥೆಯೊಂದನ್ನು ಮಾಡಬೇಕೆಂಬ ದೃಷ್ಟಿಯಿಂದಲೇ ಇದನ್ನು ಮಾಡುತ್ತಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ಈಗಾಗಲೇ ಕುರಿ ಸೊಸೈಟಿಗಳು ಇವೆ, ಅದರದೊಂದು ರಾಜ್ಯಮಟ್ಟದಲ್ಲಿ ಫೆಡರೇಷನ್ ಇದೆ, ಅದಕ್ಕೇ ಎಲ್ಲಾ ರೀತಿಯ ಶಕ್ತಿಯನ್ನು ಕೊಡಿ.

ಶ್ರೀ ಎಂ. ಮಹದೇವ್: ಅವರಿಗೆ ಯಾವರೀತಿಯ ಸಹಾಯ ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್: ನಾನು ಕೇಳಿದ ಪ್ರಶ್ನೆಗೆ ಇದುವರೆಗೂ ಉತ್ತರ ಕೊಡಲಿಲ್ಲ ಸಚಿವರು ಇದರ ಬಗ್ಗೆ ಹಿಂದೆ ಮುಂದೆ ಯೋಚನೆ ಮಾಡದೇ ಬಿಲ್ಲನ್ನು ತಂದುಬಿಟ್ಟಿದ್ದಾರೆ. ನನ್ನ ಮುಂದೆ ಒಂದು ಉದಾಹರಣೆ ಇದೆ. ರಾಮನಗರ ತಾಲ್ಲೂಕು ಕುರಿ ಸಾಕಾಣಿಕಾ ಕೇಂದ್ರ ಇದೆ ಅವರು ಒಂದೇ ತಾಲ್ಲೂಕಿನಲ್ಲಿ 80 ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿದ್ದಾರೆ. ಸಾಕಾಣಿಕೆದಾರರಿಗೆ 80 ಲಕ್ಷ ರೂಪಾಯಿ ಸಾಲ ಕೊಡುವಾಗ, 20 ಲಕ್ಷ ರೂಪಾಯಿ ಎಸ್‌ಸಿ ಎಸ್‌ಟಿ ಕಾರ್ಪೊರೇಷನ್, ಬಿ.ಸಿ.ಎಂ. ಕಾರ್ಪೊರೇಷನ್, ಇನ್ನೊಂದು ಮೈನಾರಿಟಿ ಕಾರ್ಪೊರೇಷನ್ ಈ ರೀತಿ ಹಣವನ್ನು ಸಂಗ್ರಹಿಸಿ ಇವತ್ತು ಸಾಲವನ್ನು ಕೊಟ್ಟಿದ್ದಾರೆ. ಇದೇರೀತಿ ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ಆಗಿದೆ. ಇಂಥವರ ಪರಿಸ್ಥಿತಿ, ಬೋಡ್‌ನಿಂದ ಕಂಪನಿಯಾದಾಗ ಅಥವಾ ಬೋರ್ಡ್‌ನಿಂದ ಕಾರ್ಪೊರೇಷನ್ ಆದಾಗ ಇಂಥವರ ಪರಿಸ್ಥಿತಿ ಏನಾಗುತ್ತೇ? ಅದರ ಬಗ್ಗೆ ಏನಾದರೂ ಯೋಚನೆ ಮಾಡಿದ್ದಾರಾ?

ಶ್ರೀ ಕೆ. ಜಯಪ್ರಕಾಶ ಹೆಗಡೆ (ಬ್ರಹ್ಮಾವರ): ಈ ಸಹಕಾರಿ ಸಂಘದ ಮುಖಾಂತರ ನೇರವಾಗಿ ಎಲ್ಲಾ ಸಹಕಾರಿದಾರರೂ ಬಾಕಿದಾರರಾಗಿದ್ದಾರೆ; ಅದರಲ್ಲಿ ಪಾಲ್ಗೊಂಡಿದ್ದಾರೆ. ಈಗ ಕಂಪನಿಯನ್ನು ಮಾಡಿ ಅವರನ್ನೆಲ್ಲಾ ಇದರಿಂದ ಹೊರಗಿಡುತ್ತೀರಿ. ಈಗ ಕೆಲವರ ಕೈಗೆ ಈ ಉದ್ದಿಮೆಯನ್ನು ಕೊಡುತ್ತೀರಿ. ಮಾನ್ಯ ಸಚಿವರಾದ ಶ್ರೀ ರೇವಣ್ಣನವರ ಹತ್ತಿರ ಸ್ವಲ್ಪ ಕೇಳಬೇಕಾಗುತ್ತದೆ. ಮೀನುಗಾರಿಕಾ ಅಭಿವೃದ್ಧಿ ಕಾರ್ಪೊರೇಷನ್ ಇದೆ. ಮೀನುಗಾರಿಕಾ ಫೆಡರೇಷನ್ ಇದೆ ಫೆಡರೇಷನ್ ಲಾಭದಲ್ಲಿದೆ, ಕಾರ್ಪೊರೇಷನ್ ನಷ್ಟದಲ್ಲಿದೆ. ಕಾರ್ಪೊರೇಶನ್‌ನಲ್ಲಿ ಸಂಬಳ ಕೊಡುವುದಕ್ಕೂ ಸರಕಾರದಿಂದಲೇ ಕೊಡಬೇಕಾಗುತ್ತದೆ. ಇದನ್ನೂ ಕೂಡ ಕಂಪನಿ ಮಾಡಿದರೆ ನಾಳೆಯ ದಿವಸ ಸರಕಾರವೇ ಅದರ ಹೊಣೆ ಹೊರ ಬೇಕಾಗುತ್ತದೆ. ಅದಕ್ಕಿಂತ ಫೆಡರೇಶನ್ ಮುಖಾಂತರವೇ ಮಾಡುವುದು ಒಳ್ಳೆಯದು.

ಶ್ರೀ ಹೆಚ್.ಎಂ. ರೇವಣ್ಣ (ಜವಳಿ ಸಚಿವರು): ಕುರಿಮಂಡಳಿ ವಿಚಾರ ಬಂದಾಗ ನಮ್ಮ ಹೆಸರನ್ನು ಹೇಳುತ್ತಾರೆ. ಆ ಇಲಾಖೆಯ ಮಂತ್ರಿಗಳು ಕಾರ್ಯನಿರ್ವಹಿಸುವಾಗ ನಾನು ಆ ಬಗ್ಗೆ ಮಾತನಾಡುವುದು ಸರಿಯಲ್ಲ ಎಂದು ಅಭಿಪ್ರಾಯ ಪಡುತ್ತೇನೆ.

ಶ್ರೀ ಎಂ. ಮಹದೇವ್: ಈಗ ಗ್ರಾಮಾಂತರ ಪ್ರದೇಶದಲ್ಲಿ ಕೊ-ಆಪರೇಟಿವ್ ಆಕ್ಟ್ ಪ್ರಕಾರ ಸೊಸೈಟಿಗಳನ್ನು ಫಾರ್ಮ್‌ಮಾಡಿ, ಅಲ್ಲಿ ಕುರಿ ಸಾಕಾಣಿಕೆ ಅಭಿವೃದ್ಧಿ ಮಾಡುತ್ತಾ ಇದ್ದಾರೋ ಅದಕ್ಕೆ ಯಾವರೀತಿಯಲ್ಲಿಯೂ ಧಕ್ಕೆಯಾಗುವುದಿಲ್ಲ. ಅವರ ಹಿತವನ್ನು ನಾವು ಕಾಪಾಡುತ್ತೇವೆ. ಕಾರ್ಪೋರೇಷನ್ ಆದಾಗ ಜನರಲ್ ಆಗಿ ಎಲ್ಲರಿಗೂ ಸಹಾಯ ಮಾಡುವಂಥಾದ್ದನ್ನು ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಅಧ್ಯಕ್ಷರೇ, ನಾನು ಒಂದೆರಡು ಸ್ಪಿಷ್ಟೀಕರಣವನ್ನು ಕೇಳಬಯಸುತ್ತೇನೆ. ಈಗ ಮಾನ್ಯ ಸಚಿವರು, ಈ ಒಂದು ವಿಧೇಯಕವನ್ನು ಮಂಡಿಸಿದ್ದಾರೆ. ನಮ್ಮ ಸರಕಾರದಲ್ಲಿ ಇದುವರೆಗಿನ ಕಂಪನಿಗಳು ಏನಾಗಿವೆ? ಅವುಗಳ ಸ್ಥಿತಿಗತಿಗಳು ಏನಾಗಿವೆ, ಅವುಗಳು ಹೇಗೆ ಕೆಲಸ ಮಾಡುತ್ತಿವೆ ಎಂಬ ಬಗ್ಗೆ ಸರಕಾರದಲ್ಲಿ ಒಂದು ವರದಿ ಇದೆ ಎಂದು ನಾನು ಅಂದುಕೊಂಡಿದ್ದೇನೆ. ಈ ರೀತಿಯಾಗಿ ಕಂಪನಿಗಳನ್ನು ಮಾಡುವುದರಿಂದ ಸರಕಾರಕ್ಕೆ ಆದೊಂದು ಹೊರೆಯಾಗುತ್ತಿದೆ ಎಂಬುದೂ ಕೂಡ ನಮ್ಮ ಕಣ್ಣಮುಂದೆ ಚಿತ್ರಣ ಇದೆ ಹಾಗಾಗಿ ಅಭಿವೃದ್ಧಿ ಪಡಿಸಬೇಕೆಂದರೆ, ಈಗಾಗಲೇ ಚರ್ಚೆ ಆದಂತೆ ಸರಕಾರವೇ ಅದಕ್ಕೆ ಇನ್ನಷ್ಟು ಅನುದಾನವನ್ನು ಜಾಸ್ತಿ ಮಾಡಿ, ಈಗಿರುವಂಥ ಮಂಡಳಿಗೆ ಹೆಚ್ಚುವರಿ ಸಹಾಯ ಮಾಡಿದರೆ ನಾವು ಯಾವರೀತಿಯಲ್ಲಿ ಅವರಿಗೆ ಸಹಾಯ ಮಾಡಬೇಕೆಂದಿದ್ದೇವೊ ಅದು ಅವರಿಗೆ ತಲುಪಲು ಸಾಧ್ಯವಾಗುತ್ತದೆ. ಆದ್ದರಿಂದ ಕಂಪನಿ ಮಾಡಿ ಸರಕಾರಕ್ಕೆ ಹೊರೆ ಮಾಡುವಂಥ ಕೆಲಸವನ್ನು ಸರಕಾರದವರು ಮಾಡಬಾರದು ಎಂಬ ಮಾತನ್ನು ಹೇಳುತ್ತಾ ಯಾವುದಾದರೂ ರಾಜ್ಯದಲ್ಲಿ ಮಂಡಳಿ ಇದ್ದುದ್ದನ್ನು ಕಂಪನಿಯಾಗಿ ಕನ್‌ವರ್ಟ್‌ಮಾಡಿ, ಅಲ್ಲಿ ಕುರಿ ತಳಿಗಳನ್ನಾಗಲೀ, ಕುರಿ ಉತ್ಪನ್ನ ಗಳನ್ನಾಗಲಿ ಅಭಿವೃದ್ಧಿಪಡಿಸಿರುವ ಉದಾಹರಣೆಗಳು ಇವೆಯೇ? ಆಗ ಅವರ ಮಾದರಿಯನ್ನು ನಾವು ಅನುಸರಿಸುತ್ತಿದ್ದೇವೆ, ಅದರಿಂದ ನಮ್ಮ ಕುರಿಸಾಕಾಣಿಕೆದಾರರಿಗೆ ಒಳ್ಳೆಯದಾಗುತ್ತದೆ ಎಂಬ ಅಧ್ಯಯನ ಇದೆಯೇ ಈ ರೀತಿಯಾಗಿ ಕಂಪನಿ ಮಾಡಿದ್ದರಿಂದ ಇಂಥ ಕಡೆಗಳಲ್ಲಿ ಒಳ್ಳೆಯದಾಗಿದೆ. ಎಂದಾದರೂ ಹೇಳಿ. ಬೇಡವಾದ ಕ್ರಮಗಳನ್ನು ನಮ್ಮ ರಾಜ್ಯದವರು ಮಾಡಲು ಏಕೆ ಮುಂದಾಗ ಬೇಕು? ಇವೊತ್ತು ಪರಿಸ್ಥಿತಿಗಳು ಹಾಗೆ ನಿರ್ಮಾಣ ಆಗುತ್ತಾ ಇರುವುದನ್ನು ನಾವು ಕಾಣುತ್ತಾ ಇದ್ದೇವೆ. ಇಂಥ ಸಂದರ್ಭದಲ್ಲಿ ಸರಕಾರದವರು ಈ ರೀತಿಯಾಗಿ ಕಂಪನಿಗಳನ್ನು ಮಾಡತಕ್ಕಂತಾದ್ದು ಸರಿಯೇ? ಬಹುಶಃ ಇದು ಕ್ಯಾಬಿನೆಟ್‌ನಲ್ಲಿ ಕೂಡ ಚರ್ಚೆ ಆಗಿಲ್ಲವೆಂದು ಕಾಣುತ್ತದೆ. ಹಾಗಿದ್ದರೂ ಯಾವುದೊ ಗಡಿಬಿಡಿಯಲ್ಲಿ ಅಲ್ಲಿ ಪಾಸ್ ಮಾಡಿಕೊಂಡಿರ ಬಹುದು ಎಂದು ಅಂದುಕೊಂಡಿದ್ದೇನೆ. ಇಲ್ಲವಾದಲ್ಲಿ ಯಾವುದೇ ಒಂದು ಜವಾಬ್ದಾರಿಯುತವಾದ ಸರಕಾರದಲ್ಲಿ ಈ ರೀತಿಯಾದ ಒಂದು ಹಗುರವಾದಂಥ ಯೋಚನೆಗಳು ಬರುವುದಕ್ಕೆ ಸಾಧ್ಯವಿಲ್ಲ. ಮಂತ್ರಿಗಳು ತಮ್ಮ ಕಿರೀಟಕ್ಕೆ ಒಂದು ಗರಿಬರಲಿ ಎಂದು ಮಾಡುವುದಿದ್ದರೆ ನಮ್ಮ ಅಡ್ಡಿ ಇಲ್ಲ. ಆದರೆ ನಿಜವಾಗಿಯೂ ಇದರಿಂದ ಕುರಿ ಸಾಕಾಣಿಕೆದಾರರಿಗಾಗಲೀ, ಉತ್ಪನ್ನಕ್ಕಾಗಲೀ ಯಾವುದೇ ರೀತಿಯ ಸಹಾಯ ಆಗುವುದಿಲ್ಲ. ಆದ್ದರಿಂದೆ ಸರಕಾರದವರು ಈ ಕುರಿತು ಯೋಚನೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು): ಮಾನ್ಯ ಅಧ್ಯಕ್ಷರೇ, ನಾನು ನಮ್ಮ ಲಾ-ಮಿನಿಸ್ಟರ್‌ರವರ ಹತ್ತಿರ ಹೇಳಿದೆ. ಏನಪ್ಪಾ ಅಂದರು. ಸರ್ ನಿಮ್ಮಂಥವರ ಹತ್ತಿರ ಜಗಳಾಡುವುದು ಉತ್ತಮ. ಸಗಣಿ ಕೂಡ ಸರಸವಾಡುವುದಕ್ಕಿಂತ ಗಂಧದ ಕೂಡ

ಜಗಳವಾಡುವುದು ಉತ್ತಮ, ಅದಕ್ಕಾಗಿ ನಿಮ್ಮೊಂದಿಗೆ ಜಗಳವಾಡುತ್ತೇನೆ ಎಂದು ಹೇಳಿದೆ. ನಮ್ಮ ಸಚಿವರಿಗೆ ಕಾನೂನಿನ ಜ್ಞಾನ ತುಂಬಾ ಜಾಸ್ತಿ ಇದೆ. ಹಾಗಾಗಿ ಜಗಳವಾಡಲು ನನಗೆ ಸ್ವಲ್ಪ ಖುಶಿ ಅನ್ನಿಸುತ್ತದೆ. ನಾನು ಇದನ್ನು ಕಾನೂನು ಸಚಿವರ ಬಗ್ಗೆ ಹೇಳಿದ್ದು. ಮಾನ್ಯ ಚಂದ್ರೇಗೌಡರ ಬಗ್ಗೆ ಹೇಳಿದರೆ ಮಾನ್ಯ ಮಹದೇವ್‌ರವರಿಗೆ ಅನುಕೂಲವಾಗುತ್ತದೆ. ಮಹದೇವ್‌ರವರ ಜೊತೆಗೆ ಜಗಳಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೂ ಸರಸವಾಡಲೇ ಬೇಕಾಗುತ್ತದೆ. ಇಲ್ಲಿ ಒಂದು ಸರಿಯಾದ ಯೋಜನೆಗಳು ಇಲ್ಲದೇನೇ ಬಿಲ್‌ಗಳನ್ನು ತರುತ್ತಿರುವುದು ಇದೆಲ್ಲದಕ್ಕೂ ಕಾರಣ. ಹಿಂದಿನ ಸಚಿವರು ಇದನ್ನು ಮಾಡಿದರು. ಪಾಪ ಇವರಿಗೆ ಏನೂ ಗೊತ್ತಿಲ್ಲ. ಅವರು ತಾನು ಪಶುಸಂಗೋಪನೆ ಸಚಿವರಾಗಿ ಬಿಲ್‌ನ್ನು ಸದನದ ಮುಂದಿಟ್ಟಿದ್ದಾರೆ. ಅಷ್ಟನ್ನು ಬಿಟ್ಟರೆ ಇದರ ಮೂಲ ಉದ್ದೇಶ ಏನು? ಯಾತಕ್ಕೋಸ್ಕರ ಮಂಡಳಿಯನ್ನು ತೆಗೆದು ನಿಗಮ ಮಾಡಬೇಕು? ಆ ಒಕ್ಕೂಟದ ಪ್ರಶ್ನೆ ಏನು? ಹೀಗೆ ಇವು ಯಾವುದರ ಬಗ್ಗೆ ಏನೂ ಐಡಿಯಾನೇ ಇಲ್ಲ ಅವರಿಗೆ. ಇದು 2002ನೇ ಇಸವಿಯಿಂದ ಏಕೆ ಜಾರಿಗೆ ಬರಬೇಕು? ಇವೊತ್ತು ಏಕೆ ಜಾರಿಗೆ ಬರಬಾರದು ಎಂಬ ಬಗ್ಗೆ ಅವರಿಗೆ ವಿವರಗಳಿಲ್ಲ. ಏಪ್ರಿಲ್ 1 ರಿಂದ ಇದರ ಜಾರಿಯನ್ನು ಕೇಳುತ್ತಿದ್ದಾರೆ. ಹಾಗಾಗಿ ಸದರಿ ಯೋಜನೆಯ ಕಲ್ಪನೆಯು ಆ ಖಾತೆಯ ಸಚಿವರಿಗಿಲ್ಲ. ನಾವು ಮಂಡಳಿಯಿಂದ ನಿಗಮ ಎಂದು ಮಾಡಿದರೆ ಏನನ್ನು ಮಾಡಬಹುದು? ಏನೇನು ಯೋಜನೆಗಳಿದ್ದಾವೆ? ಅವುಗಳನ್ನು ಕಾರಣದಲ್ಲಿ ಅವರು ಹೇಳಬೇಕು. ಇಂಥಿಂಥ ಯೋಜನೆಗಳೊಳಗೆ ಹಾಕಿದ್ದೇವೆ. ಆ ಯೋಜನೆಗಳಿಂದ ನಾವು ಮಂಡಳಿಯಿಂದ ನಿಗಮ ಎಂದು ಮಾಡಿದರೆ ಇಷ್ಟು ಅನುಕೂಲಗಳು ಆಗುತ್ತವೆ, ಆದಕ್ಕೋಸ್ಕರ ಈಗಿರತಕ್ಕಂಥದ್ದನ್ನು ನಿರಸನಗೊಳಿಸ ಬೇಕು ಎನ್ನತಕ್ಕಂತಾದ್ದನ್ನು ಹೇಳದೇನೇ ಎರಡು ಪೇಜ್ ಬರೆದು ಬಿಡುವುದು. ಹಾಗಾದರೆ ಅವರು ನಮ್ಮನ್ನೆಲ್ಲಾ ಕುರಿಗಳು ಎಂದು ತಿಳಿದುಕೊಂಡು ಬಿಟ್ಟಿದ್ದಾರೆಯೇ? ಹೇಗೂ ನೋಡಿಕೊಂಡು ಹೋಗುತ್ತಾರೆ ಎಂದೇ? ಅವರು ಬ್ಯಾ...ಬ್ಯಾ...ಅನ್ನುತ್ತಾರೆ, ನಾವು ಏಏಸ್ಸ್ ಎಂದು ಹೇಳುತ್ತೇವೆ ಎಂದು ತಿಳಿದುಕೊಂಡಿದ್ದಾರೆಯೇ? ಏನಾದರೂ ಒಂದು ಆಗಬೇಕಲ್ಲವೇ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಮಲ್ಲಿಕಾರ್ಜುನರವರೇ, ನೀವು ಕುರಿಗಳಿಗೆ ಏಕೆ ಅವಮಾನ ಮಾಡುತ್ತೀರಿ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಯೋಜನೆ ಮಾಡಿ ಬಡ್ಜೆಟ್ ಮಾಡುತ್ತಾರೋ, ಬಡ್ಜೆಟ್ ಮಾಡಿ ಯೋಜನೆಗಳನ್ನು ಮಾಡುತ್ತಾರೋ? ಇವರ ಉದ್ದೇಶ ಏನು? ಇವರ ಮುಂದೆ ಯಾವ ಯೋಜನೆಗಳೂ ಇಲ್ಲ. ಮುಂದೆ ಒಕ್ಕೂಟಗಳ ಪ್ರಶ್ನೆ ಏನಾಗುತ್ತದೆ ಎಂಬುದು ಗೊತ್ತಿಲ್ಲ. ನಿಗಮ ಮಾಡಬೇಕು ಸಾಲ ತರಬೇಕು. ಯಾರೋ ಒಬ್ಬರು ಹೇಳಿದರು ಎಂದು ಮಾಡುವುದು. ನಿಗಮ ಎಂದು ಮಾಡಿದರೆ ನಮಗೆ ದೊಡ್ಡ ದೊಡ್ಡ ಸಾಲ ಸಿಗುತ್ತದೆ. ನಾವು ಕಾಂಟೆಸಾ ಕಾರ್‌ನಿಂದ ಫೋರ್ಡ್ ಕಾರ್‌ಗೆ ಹೋಗಬಹುದು, ಅಥವಾ ಇನ್ನೊಂದು ಯಾವುದೋ ದೊಡ್ಡ ಕಾರ್‌ಗೆ ಹೋಗಬಹುದು. ಇಷ್ಟು ನಮಗೆ ಅನುಕೂಲವಾಗುತ್ತದೆ ಎಂಬುದಕ್ಕೆ ಇವರು ಒಂದು ಬಿಲ್ಲ್‌ನ್ನು ತಂದರು. ಬಿಲ್ಲ್ ಬಗ್ಗೆ ಪೂರ್ವಭಾವಿಯಾಗಿ ಯಾವುದೇ ಚರ್ಚೆಯಾಗಲೇ ಇಲ್ಲ. ಇದು ಯಾತಕ್ಕೋಸ್ಕರ 2002ನೇ ಇಸವಿಯಿಂದ ಜಾರಿಗೆ ಬರಬೇಕು? ಯಾತಕ್ಕೋಸ್ಕರ ಇದನ್ನು ನೀವು ಕೇಳುತ್ತಾ ಇದ್ದೀರಿ? ಏನು ಕಾರಣ? ಇದ್ಯಾವುದನ್ನೂ ಹೇಳದೇನೇ ಬಿಲ್ಲ್‌ನ್ನು ತಂದು ಇಟ್ಟಿದ್ದಾರಲ್ಲಾ ಇದು ಸರಿಯೇ? ದಯಮಾಡಿ ನೀವು ಕಾರಣದಲ್ಲಿ ಹೇಳಿ. ನಿಮ್ಮ ಯೋಜನೆಗಳು

ಏನು? ಯಾವ ಬ್ಯಾಂಕ್‌ನಿಂದ, ಯಾವ ವಿದೇಶಿ ಮೂಲದಿಂದ, ಯಾವುದೋ ಮೂಲದಿಂದ ನಾವು ಇಷ್ಟು ಹಣವನ್ನು ತರುತ್ತೇವೆ, ಇಂಥಿಂಥ ಕೆಲಸಕಾರ್ಯಗಳನ್ನು ನಾವು ಮಾಡುತ್ತೇವೆ, ತಳಿ ಅಭಿವೃದ್ಧಿಯನ್ನು ಮಾಡುತ್ತೇವೆ, ಈ ಕಾರಣಗಳಿಗಾಗಿ ಇದನ್ನು ನಿರಸನಗೊಳಿಸಿ, ಎಂದಿತ್ಯಾದಿಗಳನ್ನು ಹೇಳದೆ, ನಿರಸನಗೊಳಿಸಿ ಅಂದರೆ ಹೇಗೆ? ಹಾಗಾದರೆ ಕುರಿಗಳನ್ನು ನಿರಸನಗೊಳಿಸಿ. ಅಲ್ಲಿಗೆ ಸಮಸೆಯೇ ಬಗೆಹರಿದು ಹೋಗುತ್ತದೆ. ಕುರಿಗಳನ್ನು ನಿರಸನಗೊಳಿಸುವುದು, ಅಂದರೆ ಇರುವ ಕುರಿಗಳನ್ನೆಲ್ಲಾ ಮುಗಿಸಿಬಿಡುವುದು. ಹೀಗಾದರೆ ಅದು ಆಗುತ್ತದೆ. ನಾವು ಇವೊತ್ತು ಚಂದ್ರೇಗೌಡರನ್ನು ಹೊಗಳಿದ್ದೇವೆ. ಯಾಕೆಂದರೆ ನಿನ್ನೆ ಅವರು ಮಾಹಿತಿ ಇಲ್ಲದೇ ಹೋದುದ್ದಕ್ಕೋಸ್ಕರ ಅದನ್ನು ವಾಪಸ್ ತೆಗೆದುಕೊಂಡು ಇವೊತ್ತು ಪುನಃ ತೆಗೆದುಕೊಂಡು ಬಂದರು. ಇವರೂ ಕೂಡ ಮಾಹಿತಿಗಳು ಇಲ್ಲವಾದಲ್ಲಿ ನಾಳೆ ತೆಗೆದುಕೊಂಡು ಬರಲಿ. ಅವರನ್ನೂ ನಾವು ಹೊಗಳುತ್ತೇವೆ. ನಿಮ್ಮ ಯೋಜನೆಗಳೇನು? ಏತಕ್ಕೋಸ್ಕರ ಇದನ್ನು ತಂದಿದ್ದಾರೆ ಎಂಬ ವಿವರ ಕೊಡಲಿ, ನಾವು ಅಪ್ರೂವಲ್ ಕೊಡುತ್ತೇವೆ. ಇದು ತತ್‌ಕ್ಷಣವೇ ಆಗಿ ರಾತ್ರಿಯೇ ಮಾನ್ಯ ರಾಜ್ಯಪಾಲರ ಸಹಿಗೆ ಹೋಗಬೇಕಾಗಿಲ್ಲವಲ್ಲಾ? ಯೋಜನೆಗಳನ್ನು ಹೇಳಲಿ, ನಾವು ಅನುಮತಿ ಕೊಡುತ್ತೇವೆ. ಈಗ ದಿಡೀರ್ ಎಂದು ಒಂದು ಕಾಯಿದೆಯನ್ನು ಇಲ್ಲಿ ಪಾಸ್ ಮಾಡುವುದು ಸರಿಯಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್: ತಮಗೆ ಕುರಿ ಟೇಸ್ಟ್ ಗೊತ್ತಿಲ್ಲ, ಇಷ್ಟು ಉದ್ದ ಮಾತನಾಡಿದರೆ ಹೇಗೆ? ಈಗ ಮಂಡನೆ ಮಾಡಿರುವವರಿಗೂ ಕುರಿ ಟೇಸ್ಟ್ ಗೊತ್ತಿಲ್ಲ, ಮಾತನಾಡುವವರಿಗೂ ಗೊತ್ತಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಇಲ್ಲಿ ಎರಡು ಕೆಟಗರಿ ಇದೆ. ಒಂದು ಕುರಿ ಸಾಕುವವರು ನಾವು, ಇನ್ನೊಂದು ಕುರಿ ಖಾಲಿ ಮಾಡುವವರು ಅವರು.

ಉಪಾಧ್ಯಕ್ಷರು: ಕುರಿಗಳ ಬಗ್ಗೆ ಮಾನ್ಯ ಸಗೀರ್ ಅಹಮದ್‌ರವರಿಗೆ ಚೆನ್ನಾಗಿ ಗೊತ್ತಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ಕುರಿಗಳನ್ನು ಸಾಕತಕ್ಕಂಥವರು ನಾವು. ಕೊಂದು ತಿನ್ನತಕ್ಕವರು ಅವರು.

ಶ್ರೀ ಸಿ.ಆರ್. ಸಗೀರ್ ಅಹಮ್‌ದ್: ನೀವು ಕುರಿ ಕೋಳಿ ನರಿಯನ್ನು ಸಾಕುವುದಿಲ್ಲ. ಕೊನೆಗೆ ಒಂದು ನೊಣವನ್ನೂ ಸಾಕಾಗುವುದಿಲ್ಲ. ಸುಮ್ಮನೆ ಎತಕ್ಕೆ ಮಾತನಾಡುತ್ತೀರಿ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ: ನಾನು ಇವೊತ್ತು ಹೇಳತಕ್ಕಂತಾದ್ದು, 'ಕುರಿ ಮತ್ತು ಕುರಿ ಅಭಿವೃದ್ಧಿಗಳ ವಿಧೇಯಕ ನಿರಸನ' ಎಂದು ಇದೆಯಲ್ಲಾ ನಾವು 1974ನೇ ಇಸವಿಯ ವಿಧೇಯಕವನ್ನು ನಿರಸನಗೊಳಿಸಿದರೆ, ಉದ್ದೇಶ ಇಲ್ಲದೇನೇ ನಾವು ಇದನ್ನು ಪಾಸ್ ಮಾಡಿಕೊಟ್ಟರೆ, ಮುಂದಿನ ವರ್ಷ ನಾವು ಇದೇ ಸದನದಲ್ಲಿದ್ದಾಗ, ಇದನ್ನು ನಿರಸನಗೊಳಿಸ ಬೇಕೆಂದು ಇನ್ನೊಂದನ್ನು ತರುತ್ತಾರೆ. ಆ ಪರಿಸ್ಥಿತಿಯ ನಿರ್ಮಾಣವಾಗ ಬಾರದು. ಅದಕ್ಕೋಸ್ಕರವಾಗಿ ಪೂರ್ಣ ಮಾಹಿತಿಗಳೊಂದಿಗೆ ನಾಳೆಗೆ ಬರಲಿ, ಅಪ್ರೂವಲ್ ಕೊಡೋಣ.

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಉಪ-ಸಭಾಧ್ಯಕ್ಷರೇ, ಅವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಒಂದು ಕಾಲಕ್ಕೆ ಹಿಂದಿನ ಸರಕಾರಗಳು. ಸ್ವಾತಂತ್ರ್ಯ ಬಂದ ದಿವಸಗಳಲ್ಲಿ ರಾಷ್ಟ್ರೀಕರಣ ನಮ್ಮ ಗುರಿ ಎಂದು ಇಟ್ಟುಕೊಂಡು ಹೊರಟಿದ್ದವು. ಈಗ ಖಾಸಗೀಕರಣ ಮತ್ತೊಂದು ವ್ಯವಸ್ಥೆ. ಕೇಂದ್ರ ಸರಕಾರವೇ ಡಿಸ್‌ಇನ್ವೆಸ್ಟ್‌ಮೆಂಟ್‌ಗಾಗಿಯೇ ಒಬ್ಬ ಮಂತ್ರಿಯನ್ನು ಮಾಡಿದ್ದಾರೆ.

ಅಂಥ ಹುದ್ದೆಯ ಮಂತ್ರಿ ಇನ್ನಾವ ರಾಜ್ಯದಲ್ಲಿ ಇದ್ದಾರೆಯೇ ಅಂದರೆ ಕರ್ನಾಟಕ ಬಿಟ್ಟರೆ ಬೇರೆಲ್ಲಿಯೂ ಇಲ್ಲ. ಅದಕ್ಕೆ ನಾನೇ ಮಂತ್ರಿಯಾಗಿ ಇದ್ದೇನೆ. ಅದಕ್ಕೆ ಕೇಂದ್ರ ಸರಕಾರ ಏನು ಆಲೋ ಮಾಡಿತು.

4.40 ಪಿ.ಎಂ

ಅಂತಹ ಆಲೋಚನೆಯನ್ನು ರಾಜ್ಯ ಸರ್ಕಾರವೂ ಮಾಡಿ ಪದ್ಮನಾಭನ್ ಕಮಿಷನ್ ನೇಮಕ ಮಾಡಿ ಸುಮಾರು 85 ಕಂಪೆನಿಗಳ ಬಗ್ಗೆ ಆಳವಾದ ಅಧ್ಯಯನ ಮಾಡುವುದಕ್ಕಾಗಿ ಅವರಿಗೆ ನಾವು ರೆಫರ್ ಮಾಡಿದ್ದೇವೆ. ಸುಮಾರು 38 ಕಂಪೆನಿಗಳು ಅಪಾಯದಲ್ಲಿದ್ದಾವೆ ಎನ್ನುವಂತಹ ವರದಿ ಕೊಟ್ಟರು. ಪ್ರಿಯಾರಿಟಿ ಲಿಸ್ಟ್ ಮಾಡಿ ಆ 25 ಕಂಪೆನಿಗಳನ್ನು ಖಾಸಗೀಕರಣ ಮಾಡುವುದೋ, ಇಲ್ಲ ಮಾರಾಟ ಮಾಡುವುದೋ ಎಂಬ ತೀರ್ಮಾನಕ್ಕೆ ನಾವು ಬಂದೆವು. ಅದರರ್ಥ ಎಲ್ಲಾ 85 ಕಂಪೆನಿಗಳನ್ನೂ ನಾವು ಖಾಸಗೀಕರಣ ಮಾಡುತ್ತೇವೆ ಮಾರಾಟ ಮಾಡುತ್ತೇವೆ ಅಂತ ಅಲ್ಲ. ಯಾವುದು ಲಾಭದಾಯಕವಾಗಿ ನಡೆಯುತ್ತದೋ ಅವು ನಡೆದುಕೊಂಡು ಹೋಗುತ್ತವೆ. ಅಂಥಾದ್ದರಲ್ಲಿ ಇಂಥಾದ್ದು ಒಂದು ಕಂಪೆನಿ. ಈ ಕಂಪೆನಿ it is governed by companies act. Companies Actನಲ್ಲಿ ನಾವು Cooperative Societies Act ಕೆಳಗಡೆ ಸರ್ಕಾರದ ಕಡೆಯಿಂದ ನಾವು ಏನು ಆಟ ಆಡುತ್ತೇವೆ ಹಾಗೆ ಆಡುವುದಕ್ಕೆ ಆಗುವುದಿಲ್ಲ. It is governed by the Companies Act. It has certain definite Act and rules ಇದೆ. So, therefore Company shareholders ಅದು ಸರ್ಕಾರಿ ಕಂಪೆನಿ ಆದರೂ ಕೂಡ government may be a bigger share holder but it cannot playt a role as we play in Cooperative Societies. ಏನಾಗುತ್ತದೆ? ಒಕ್ಕೂಟಗಳ ಪರಿಸ್ಥಿತಿಯೇನು ಎನ್ನುವಂಥಾದ್ದು ಮಲ್ಲಿಕಾರ್ಜುನ್‌ರವರ ಮೂಲಪ್ರಶ್ನೆ. ಒಕ್ಕೂಟಗಳು ಒಕ್ಕೂಟಗಳಾಗಿ ಉಳಿಯುತ್ತವೆ, because they are registered under cooperative societies act. Cooperative Act ಕೆಳಗೆ ಯಾವ್ಯಾವು ರಿಜಿಸ್ಟರ್ ಆಗಿರುತ್ತವೋ ಅವು ಉಳಿದುಕೊಂಡಿರುತ್ತವೆ. ಈ Companies Act ಕೆಳಗೆ ಯಾವ್ಯಾವು ಆಗುತ್ತಾರೋ share holders ಆಗುತ್ತಾರೋ ಅಂಥವು ಬರುತ್ತವೆ. ಲಾಭ ನಷ್ಟಗಳನ್ನು ಮತ್ತೊಂದು ಮಗದೊಂದು.. ಸಹಕಾರ ಸಂಘಗಳಲ್ಲಿ ಏನು ನಡೆಯುತ್ತದೆ ಎಂಬುದು ನಮಗೆಲ್ಲಾ ಗೊತ್ತಿದೆ. ಹಾಗೆ ಕಂಪೆನಿಗಳಲ್ಲಿ ನಡೆಯುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡಗಿ): ಸಹಕಾರ ಸಂಘಗಳಲ್ಲಿ ಏನು ನಡೆಯುತ್ತಿದೆ? ಅಲ್ಲೂ ಸೌಹಾರ್ದ ಆಕ್ಟ್ ಬಂದಿದೆ.

ಶ್ರೀ ಡಿ.ಬಿ ಚಂದ್ರೇಗೌಡ: ನಿಮ್ಮಷ್ಟು ಎಕ್ಸ್‌ಪರ್ಟ್ ಅಲ್ಲ ನಾನು.

ಶ್ರೀ ಎಸ್.ಎಸ್. ಪಾಟೀಲ್ : ಎಲ್ಲಾ ಎಕ್ಸ್‌ಪರ್ಟ್ ಇದ್ದೀರಿ ನೀವು. ಏನೇನು ಕೆಡುಕು ಮಾಡಬೇಕೋ ಅದನ್ನೆಲ್ಲಾ ಮಾಡಿ ಮತ್ತೆ ಸಹಕಾರ ರಂಗವನ್ನೇ ನಿಂದಿಸುವುದು.

ಶ್ರೀ ಡಿ.ಬಿ ಚಂದ್ರೇಗೌಡ: ಇದರಿಂದ ಹೊರಗಡೆಯಿಂದ ಹೆಚ್ಚು ಅಸಿಸ್ಟೆನ್ಸ್ ಕಂಪೆನಿ ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಕಾರ್ಪೊರೇಷನಿಗೆ ಸರ್ಕಾರದ ಹಿಡಿತ ಇರುತ್ತದೆ. ಸರ್ಕಾರದವರು ಏನು ಹೇಳುತ್ತಾರೋ ಅದರ ಬಯಕೆಯಂತೆ ಮಾಡುತ್ತಾರೆ ಹೆಚ್ಚು ಅಧಿಕಾರ ಹೆಚ್ಚುಹಣ ಹೆಚ್ಚು ಪಾರದರ್ಶಕತೆ ಇರುತ್ತದೆಂಬ ಉದ್ದೇಶದಿಂದ ಈ ಕುಪನೀಸ್ ಆಕ್ಟ್‌ನಲ್ಲಿ ತಂದು ಮಂಡಲಿಯಿಂದ ಅದನ್ನು ಕಂಪೆನಿಯಾಗಿ ಪರಿವರ್ತನೆ ಮಾಡುತ್ತಿದ್ದೇವೆ. ಒಂದು ಪ್ರಯೋಗ ಮಾಡೋಣ. It

becomes a govt. company. Companies Act is different from that of the Corporation. ಅವೆಲ್ಲಾ under the cooperative act ಕೆಳಗೆ ರಿಜಿಸ್ಟರ್ ಆಗಿರುತ್ತವೆ. ಅವುಗಳಿಗೆ ಸ್ವಲ್ಪ ಕೈಹಾಕುವುದಕ್ಕೆ, ಆಲ್ಲಾಡಿಸುವುದಕ್ಕೆ ಅವಕಾಶ ಇರುತ್ತದೆ. ಆದರೆ ಕಂಪನೀಸ್ ಆಕ್ಟ್‌ನಲ್ಲಿ ಅಂಥಾದ್ದಕ್ಕೆ ಅವಕಾಶ ಇಲ್ಲ. ಅದಕ್ಕಾಗೇ exclusive company for a special purpose ಅನ್ನುವಂತಹ ಉದ್ದೇಶ ಗುರಿ ಇಟ್ಟುಕೊಂಡು ಮಾಡಿದ್ದೇವೆ. This company may become one of the best companies of the country, we cannot say. ಅದಕ್ಕೊಂದು ಅವಕಾಶನಾದರೂ ಕೊಡಬೇಕಲ್ಲಾ ನಾವು. ಅವಕಾಶವೇ ಕೊಡದೆ ಈಗಲೇ ನೀವು ಏನು ಮಾಡುತ್ತೀರಿ ಹೇಳಿ ಹೇಗೆ ಬರೆಯುತ್ತೀರಿ ಅಂದರೆ ಕಷ್ಟವಾಗುತ್ತದೆ. ಆದ್ದರಿಂದ ನಾನು ತಮ್ಮಲ್ಲಿ ಅಪೀಲ್ ಮಾಡುತ್ತೇನೆ ಒಂದು ಅವಕಾಶ ಕೊಡಿ then we will come back to you after the formation of the company; performance report ನಾವು ಇಲ್ಲೇ ಇಡಬೇಕಲ್ಲಾ. ನಿಮ್ಮ ಮುಂದೇನೆ ಚರ್ಚೆಗೆ ಬರಬೇಕಲ್ಲಾ. ಆದ್ದರಿಂದ ಒಂದು ಅವಕಾಶ ಕೊಡಿ ಅಂತ ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಡಿ.ವಿ ಸದಾನಂದಗೌಡ: ಅಧ್ಯಕ್ಷರೇ, ಈಗ ನೀವು ಈ ಕುರಿ ಮಂಡಲಿಯನ್ನು ಕಂಪೆನಿ ಮಾಡಬೇಕೆಂದು ನಿಶ್ಚಯ ಮಾಡಿದ್ದೀರಿ. ಇದಕ್ಕಿಂತಲೂ ದೊಡ್ಡ ವ್ಯವಸ್ಥೆಯಾಗಿರುವ ಕೆಎಂಎಫ್ ಅನ್ನು ಕಂಪೆನಿಯಾಗಿ ಮಾಡುವ ಇರಾದೆಯಲ್ಲಿ ತಾವೇನಾದರೂ ಇದ್ದೀರಾ?

ಶ್ರೀ ಎಂ. ಮಹಾದೇವ್(ಸಕ್ಕರೆ ಸಚಿವರು) : ಆ ಉದ್ದೇಶ ಏನಿಲ್ಲ.

ಶ್ರೀ ಡಿ.ವಿ ಸದಾನಂದಗೌಡ: ನಾನು ಹೇಳುವುದು ಯಾಕೆಂದರೆ ಇದಕ್ಕಿಂತ ಜಾಸ್ತಿ ವ್ಯಾಪ್ತಿ ಇದೆ ಅದಕ್ಕೆ. ಇದಕ್ಕಿಂತ ಜಾಸ್ತಿ ಜನರನ್ನು ಅದು ಮುಟ್ಟುತ್ತದೆ. ಇದಕ್ಕಿಂತ ಜಾಸ್ತಿ ವ್ಯವಸ್ಥೆಗಳು ಅದರಲ್ಲಿ ಆಗಬೇಕು. ಜಾಸ್ತಿ ಸಾಲ ಪಡೆಯಲು ಅದಕ್ಕೆ ಒಂದು ವೇದಿಕೆ ಆಗುತ್ತದೆ. ಅದನ್ನೂ ಕೂಡ ತಾವು ಮಾಡಬಹುದಲ್ಲಾ ಯಾಕೆ ಇದನ್ನು ಮಾತ್ರ ಮಾಡುತ್ತೀರಿ?

ಶ್ರೀ ಡಿ.ಬಿ ಚಂದ್ರೇಗೌಡ: ರೈತರ ಹಿತ ಕಾಯುತ್ತದೆ ಅಂತ ಕಂಡರೆ ಅಂತಹ ಆಲೋಚನೆ ಮಾಡುವುದರಲ್ಲೇನೂ ತಪ್ಪು ಅಂತ ನಾನು ಹೇಳಲಾರೆ. ಆದರೆ ಎಲ್ಲವೂ ಜನಪರವಾಗಿರಬೇಕೆಂಬ ದೃಷ್ಟಿಯಿಂದ ಇಲ್ಲಿರತಕ್ಕಂಥಾದ್ದು ತೀರ ಹಿಂದುಳಿದ ವರ್ಗಕ್ಕೆ ಸೇರಿದವರ ಆರ್ಥಿಕವಾಗಿ ತುಂಬಾ ಅಸಬಲರಾಗಿರುವವರಿಗೆ ಸಹಾಯ ಮಾಡಲು ಇದನ್ನು ಕಂಪೆನಿ ಮಾಡಲಾಗುತ್ತಿದೆ. ಇದನ್ನು ಸ್ವಾಗತಿಸಿ.

ಶ್ರೀ ಎಂ.ಡಿ ಲಕ್ಷ್ಮೀನಾರಾಯಣ (ತುರುವೇಕೆರೆ) : ಒಕ್ಕೂಟಗಳ ಬಗ್ಗೆ ಮಂತ್ರಿಗಳು ಹೇಳಲೇ ಇಲ್ಲ. ಮೊನ್ನೆ ಸಗೀರ್ ಅಹಮದ್‌ರವರು, ವಸತಿ ಸಚಿವರು ಹೇಳಿದರು. ಒಂದು ಸಣ್ಣ ಮನೆ ಕಟ್ಟಬೇಕಾದರೂ 14 15 ಅಡಿ ಪ್ಲಾನ್ ಕೊಡುತ್ತಾರೆ ಎಸ್ಟಿಮೇಟ್ ಕೊಡುತ್ತಾರೆ ಫೈನಾನ್ಸ್ ಕೊಡುತ್ತಾರೆ. ಹಾಗಾಗಿ ಆ ಅಂಶವನ್ನು ಇದರಲ್ಲಿ ಅಳವಡಿಸದೇನೇ ಬಿಲ್ ಮಾಡಿಕೊಳ್ಳುತ್ತೇವೆ ಎಂದರೆ ಹೇಗಾಗುತ್ತದೆ? ಅದರ ಬಗ್ಗೆ ಏನಾದರೂ ಕೂಡ ಸ್ವಲ್ಪ ಮಾಹಿತಿ ಕೊಟ್ಟರೆ ತಾನೇ? ಈಗ ಕುರಿ ಕೊಬ್ಬುತ್ತಾವೋ ಕುರಿ ಕಾಯೋನು ಕೊಬ್ಬುತ್ತಾರೋ ಏನಾದರೂ ನಮಗೆ ಮಾಹಿತಿ ಬೇಕಲ್ಲಾ.

ಶ್ರೀ ಡಿ.ಬಿ ಚಂದ್ರೇಗೌಡ: ಈ ಕಂಪೆನಿ ಒಳಗೆ objects, reasons ಏನು ಹಾಕುತ್ತೀರಿ, ಆರ್ಥಿಕವಾಗಿ ಹೆಚ್ಚು ತರುವ ಸಾಮರ್ಥ್ಯ ಹೇಗೆ ಹೆಚ್ಚಿಸಿಕೊಳ್ಳುತ್ತೀರಿ ಏನ್ನುವಂಥ ಶಂಕೆಗಳೇನು

ಇವತ್ತಿದೆಯೋ ಅವುಗಳನ್ನು ನಿವಾರಣೆ ಮಾಡುವುದಕ್ಕಾಗಿ ನಾವು ಈ ಕ್ರಮ ಕೈಗೊಂಡಿದ್ದೇವೆ It is an act of Parliament called companies act. ಆದ್ದರಿಂದ ಅಷ್ಟು ಸುಲಭವಾಗಿ ಇದರಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಅವರು ತಮ್ಮನ್ನು ತಾವೇ ಕಟ್ಟಿಹಾಕಿಸಿಕೊಳ್ಳುತ್ತಿದ್ದಾರೆ ನಮ್ಮ ಕಡೆಯಿಂದ. ಆದ್ದರಿಂದ ಆಯಿತಪ್ಪ ನೀವು ಕಂಪೆನಿ ಮಾಡಿ ಅಂತ ಹೇಳಿ ಕೈಕಟ್ಟಿಸಿಕೊಳ್ಳುತ್ತಿದ್ದೀರಿ ಅಂದರೆ ಅದನ್ನು ನೀವು ಸ್ವಾಗತಿಸಬೇಕು. ನೋಡೋಣ, ಅದನ್ನು ಆಲೋಚನೆ ಮಾಡಿ...

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಅಧ್ಯಕ್ಷರೇ ಮಾನ್ಯ ಚಂದ್ರೇಗೌಡರು ಹೇಳಿದರು, ಕಂಪನೀಸ್ ಆಕ್ಟ್‌ನಲ್ಲಿ ಟ್ರಾನ್ಸಪರೆಂಟಾಗಿ ಕೆಲಸ ಆಗುತ್ತದೆ, ಏನೂ ಆಟವಾಡುವುದಕ್ಕೆ ಆಗುವುದಿಲ್ಲ ಅಂತ. ಹಾಗಾದರೆ ಇಷ್ಟು ಕಂಪೆನಿಗಳು ಡಿಸ್‌ಇನ್‌ವೆಸ್ಟ್‌ಮೆಂಟಿಗೆ ಯಾಕೆ ಬಂದುವು? ಕೇಂದ್ರ ಸರ್ಕಾರದಲ್ಲೂ ಡಿಸ್‌ಇನ್‌ವೆಸ್ಟ್‌ಮೆಂಟ್ ಮಾಡುತ್ತಾರೆ, ಇಲ್ಲೂ ಡಿಸ್‌ಇನ್‌ವೆಸ್ಟ್‌ಮೆಂಟ್ ಮಾಡುತ್ತಿದ್ದಾರೆ. ಎಲ್ಲಾ ಲಾಸ್‌ಗೇಕೆ ಹೋಯಿತು? ಇಷ್ಟು ಸರ್ಕಾರಿ ಕಂಪೆನಿಗಳು ನಷ್ಟಕ್ಕೆ ಯಾಕೆ ಹೋದುವು?

ಶ್ರೀ ಡಿ.ಬಿ ಚಂದ್ರೇಗೌಡ: ಕೊಡುತ್ತೇನೆ ಪದ್ಮನಾಭನ್ ವರಿದಿ, ಓದಿ ಪೂರ್ತಾ

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಸರ್ಕಾರದ ಕಂಪೆನಿಗಳೆಲ್ಲಾ ಅದೇ ಮಟ್ಟಕ್ಕೆ ಹೋಗುವಂಥದ್ದೇ.

s **ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)** : ಒಳ್ಳೇ ಕುರಿಮಾಂಸ ಸಿಗಬೇಕೆಂದರೆ ಇದನ್ನು ಮಾಡಿಕೊಡಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಮಾನ್ಯ ಅಧ್ಯಕ್ಷರೇ, ನಾನು ಅಭಿಪ್ರಾಯ ಹೇಳುತ್ತೇನೆ ಇದನ್ನು ನಿರಶನಗೊಳಿಸಿ ಬೇರೆ ತರುವುದರಿಂದ ಕುರಿಗಳ ಮತ್ತು ಅವನ್ನು ಸಾಕುವವರ ಮೇಲೂ ನಾವು ಸಾಲದ ಹೊರೆಯನ್ನು ಅವರ ತಲೆ ಮೇಲೆ ಹೇರುತ್ತೇವೆ. ಇದರಿಂದ ಬಾಣಲೆಯಿಂದ ಬೆಂಕಿಗೆ ಬಿದ್ದ ಹಾಗುಗುತ್ತದೆ. ಅದಕ್ಕಿಂತ ಏನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಪರಿಶೀಲನೆ ಮಾಡಿ ಪರಿಶೀಲನೆ ಮಾಡುವುದಕ್ಕೆ ಆಗುವುದಿಲ್ಲ ಅಂದರೆ ಪಾಸ್ ಮಾಡಿಕೊಳ್ಳಿ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಅಧ್ಯಕ್ಷರೇ, ಒಂದೇ ಒಂದು ಸಲಹೆ. ಕಾನೂನನ್ನು ಮಾಡತಕ್ಕಂತಹವರು ನಾವೇ, ಅದನ್ನು ನಿರಶನಗೊಳಿಸುವಂತಹವರೂ ನಾವೇ. ಅದನ್ನು ಕಂಪನಿಯಾಗಿ ಪರಿವರ್ತನೆ ಮಾಡುವುದರಿಂದ ಆಗತಕ್ಕಂತಹ ಲಾಭಗಳ ಬಗ್ಗೆ ಮಾನ್ಯ ಕಾನೂನು ಸಚಿವರು ಹೇಳಿದ್ದಾರೆ. ನನಗೆ ಒಂದು ಆತಂಕ ಇದೆ. ದಯಮಾಡಿ ಅದನ್ನು ಕ್ಲಾರಿಫೈ ಮಾಡಬೇಕು. ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ ಇದೆಯಲ್ಲ ಅಲ್ಲಿ ನೇರವಾಗಿ ಕುರಿ ಸಾಕುವವರು ಬಡವರು ಮತ್ತು ರೈತರು. ಅವರು ಸಹಕಾರ ಕಾಯಿದೆ ಕೆಳಗೆ ಕೆಲಸ ಮಾಡುವುದರಿಂದ ಅವರಿಗೊಂದು ತರಹ ಇಂಟರ್ನಲ್ ಡೆಮಾಕ್ರಸಿ ಇರುತ್ತದೆ, ಅವರ ಉತ್ಪನ್ನಗಳನ್ನು ಮಾರತಕ್ಕಂಥಾದ್ದು ನೇರವಾಗಿ we can see the involvement of farmers in that Development Board. ಈಗ ನೀವು ಕಂಪೆನಿ ಮಾಡಿದ ತಕ್ಷಣ ಎಲ್ಲೋ ಒಂದು ಕಡೆ ಆ ರೈತರನ್ನು ಹೊರಗಿಟ್ಟು ಬರೀ ಅಧಿಕಾರಿಗಳು ಅವರ ಮೂಲಕವೇ ಮ್ಯಾನೇಜ್ ಮಾಡತಕ್ಕಂಥಾದ್ದು ತನ್ಮೂಲಕ ಯಾವ ಉದ್ದೇಶಕ್ಕಾಗಿ ಕುರಿ ಅಭಿವೃದ್ಧಿ ಮಂಡಲಿ ಮಾಡಿದೆವು ಅದು ಸಫಲವಾಗುವುದಿಲ್ಲವೇನೋ ಎಂಬ ಆತಂಕ ಒಂದು. ಎರಡನೆಯದು, ಮಾನ್ಯ ಕಾನೂನು

ಸಚಿವರಿಗೆ ಸಂಬಂಧಪಟ್ಟಂತೆ ಇದನ್ನು ನಿರಶನಗೊಳಿಸಲು ಕಾರಣ ಉದ್ದೇಶ ಏನು ಎಂಬ ಬಗ್ಗೆ ಹೇಳುತ್ತೀರಿ. ಆದರೆ ನಮಗೆ ಏನೂ ರೀಸನ್ಸ್ ಕೊಡುವುದಿಲ್ಲ ನಮಗೆ. ಏನಾಗುತ್ತದೆ ಒಂದು ಕಾನೂನನ್ನು 73ನೇ ಇಸವಿಯಲ್ಲಿ ನಾವು ಮಾಡಿದ್ದೇವೆ ಅದನ್ನು ಇಷ್ಟು ಬೇಗ ನಾವು ರಿಪೀಲ್ ಮಾಡಬೇಕಾದರೆ ಅದಕ್ಕೆ ನಾವು convincing reasons ಕೊಡಬೇಕು. ರೀಸನ್ಸ್ ಹೇಳಲು ನಿಮಗೇನು ತೊಂದರೆಯಾಗಿದೆ ಇಲ್ಲಿ? ರೀಸನ್ಸ್ ಕೊಟ್ಟುಬಿಟ್ಟರೆ ನಾವು ಇಷ್ಟೆಲ್ಲಾ ಕೇಳಿ ಸಚಿವರಿಂದ ಕೇಳುವ ಉದ್ದೇಶವೇ ಇರುತ್ತಿರಲಿಲ್ಲ. ಆದ್ದರಿಂದ ನೀವು ಯಾವುದೇ ಆಕ್ಟನ್ನು ರಿಪೀಲ್ ಮಾಡುವಾಗ you must give convincing reasons. ಇಲ್ಲದೇಹೋದರೆ, ನಾವು ನಿಮ್ಮನ್ನು ಕೇಳಿ ತಿಳಿದುಕೊಳ್ಳುವಂಥಾದ್ದು ಹೀಗೆ ಮಾಡಬಹುದು ಅಂತ presumptions assumptions ಎಲ್ಲಾ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಮುಂದೆ ಇಂಥ ಯಾವುದೇ ಬಿಲ್ಲು ನೀವು ಮಂಡಿಸುವ ಸಂದರ್ಭದಲ್ಲಿ ಅದರೊಳಗೇನೇ ರೀಸನ್ಸ್ ಕೊಡತಕ್ಕಂಥಾದ್ದು ಬಹಳ ಮುಖ್ಯ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ನಮಗೆ ಕನ್ವಿನ್ಸ್ ಮಾಡದಿದ್ದರೆ ಹೋಗಲಿ ಇವರು ಮಾನ್ಯ ಮುದ್ದಹನುಮೇಗೌಡರಿಗಾದರೂ ಕನ್ವಿನ್ಸ್ ಮಾಡಬೇಕು.

ಶ್ರೀ ಎಸ್.ಪಿ ಮುದ್ದಹನುಮೇಗೌಡ : ಕಾನೂನು ಸಚಿವರು ಕೊಟ್ಟಿರುವ ಅಭಿಪ್ರಾಯಕ್ಕೆ ನನಗೆ ಸಹಮತ ಇದೆ. ಆದರೆ ಮುಂದಿನ ದಿನಗಳಲ್ಲಿ ಹಾಗೆ ಮಾಡಬೇಕಾಗುತ್ತದೆ. ನನ್ನ ಒಂದು ಆತಂಕ ಏನಿತ್ತು ಅಂದರೆ ರೈತರನ್ನು ಎಲ್ಲೋ ಒಂದು ಕಡೆ ನಾವು ದೂರ ಇಡುತ್ತೇವೇನೋ ಈ ಕಂಪೆನಿಗಳನ್ನು ಮಾಡುವುದರಿಂದ ಮತ್ತು ಅವರಿಗೇನು ಇಂಟರ್ನಲ್ ಡೆಮಾಕ್ರಸಿ ಅಂತ ಏನಿತ್ತು ಎಂಬ ಬಗ್ಗೆ ಮಾನ್ಯ ಸಚಿವರೋ ಯಾರಾದರೂ ನಮಗೆ ಹೇಳಬೇಕು. ಯಾಕೆಂದರೆ ಆ ಸಮಾಧಾನ ಇಲ್ಲದೇ ಹೋದರೆ ಇಲ್ಲಿ ನಾವು ಸುಮ್ಮನೆ ಒಂದು ಆಕ್ಟ್ ಮಾಡಿ to please somebody ಏನೋ ಮಾಡಿದೆವು ಅನ್ನುವ ಹಾಗೆ ಆಗುವುದು ಬೇಡ.

ಶ್ರೀ ಡಿ.ಬಿ ಚಂದ್ರೇಗೌಡ: ಅವರು ನ್ಯಾಯಾಧೀಶರಾಗಿ ಅನೇಕ ಕೇಸ್‌ಗಳನ್ನು ತೀರ್ಮಾನ ಮಾಡಿದವರು. ಕಂಪೆನಿ ಆಕ್ಟಿಗೂ ಕಾರ್ಪೊರೇಷನ್‌ಗೂ ಇರುವಂತಹ ವ್ಯತ್ಯಾಸ ಏನು ಎಂದು ನಾನು ಅವರಿಗೇನೂ ಹೇಳಬೇಕಾಗಿಲ್ಲ. ಕಾರ್ಪೊರೇಷನ್‌ನಲ್ಲಿ ನಮಗೆಲ್ಲಾ ಹಸ್ತಕ್ಷೇಪ ಮಾಡುವುದಕ್ಕೆ ಅವಕಾಶ ಇರುತ್ತದೆ. ಅದು ಬೇಡ ಎಂದು ಹೇಳಿ ಕಂಪನಿ ಮಾಡಿದ್ದೇವೆ. It is governed by a separate Act called the Companies Act. ಅಲ್ಲಿ ನಮ್ಮ ಹಸ್ತಕ್ಷೇಪ ಇರುವುದಿಲ್ಲ ಎನ್ನುವುದೇ ಬಹಳ ಮುಖ್ಯವಾದಂತಹ ಅಂಶ. ಅದನ್ನು ಗಮನದಲ್ಲಿಟ್ಟುಕೊಂಡರೆ ಸಾಕು ಎಂಬುದು ನನ್ನ ಅಭಿಪ್ರಾಯ.

ಶ್ರೀ ಎಸ್. ಸುರೇಶ್ ಕುಮಾರ್: ಆದರೆ ತಾವು ಒಂದು ವಿಚಾರ ಹೇಳಿದಿರಿ. ಆ ಕಾರ್ಪೊರೇಷನ್ ಆದರೆ ಹಸ್ತಕ್ಷೇಪ ಇರಬಹುದು, ಕಂಪನಿ ಹಸ್ತಕ್ಷೇಪ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದಿರಿ. ನಾವೇ ನೋಡಿದ ಹಾಗೆ ಇದು ಎಷ್ಟರಮಟ್ಟಿಗೆ ನಿಜ ಸ್ವಾಮಿ. ಇವತ್ತು ಎನ್‌ಜಿಇಎಫ್ ಹಾಳಾಗಲಿಕ್ಕೆ ಸರ್ಕಾರದ ಹಸ್ತಕ್ಷೇಪ ಎಷ್ಟು ಎಂಬುದು ನಿಮಗೂ ಗೊತ್ತು, ನನಗೂ ಕೂಡ ಗೊತ್ತು. ಇದು ಕಂಪನೀಸ್ ಆಕ್ಟ್‌ನಲ್ಲಿ ತಾನೇ ಮಾಡಿದ್ದು? Is it not a Government company? ಹಸ್ತಕ್ಷೇಪ ಹೇಗೆ ಸರ್ಕಾರದ್ದು ಕಡಿಮೆ ಆಯಿತು?

ಶ್ರೀ ಡಿ.ಬಿ. ಚಂದ್ರೇಗೌಡ : ಸರ್ಕಾರದ ಹಸ್ತಕ್ಷೇಪ ಕಡಿಮೆ ಆಗುವುದಿಲ್ಲ, ಕಂಪನಿ ಇಂಟರೆಸ್ಟ್ ಕಡಿಮೆ ಆಯಿತು.

ಶ್ರೀ ಎಸ್. ಸುರೇಶ್ ಕುಮಾರ್: ಎನ್‌ಜಿಇಎಫ್ ಎಂಬ ಚಿನ್ನದ ಮೊಟ್ಟೆ ಇಡುತ್ತಿದ್ದ ಕೋಳಿಯನ್ನು ಕೊಲ್ಲಲಿಕ್ಕೆ ದೊಡ್ಡ ಕೊಲೆಗಾರ ಎಂದರೆ ಸರ್ಕಾರ. ಮೈಸೂರು ಲ್ಯಾಂಪ್ಸ್‌ಎಂಬಂತಹ ಒಂದು ದೊಡ್ಡ ಸಂಸ್ಥೆಯನ್ನು ಕೊಲೆ ಮಾಡಿಸಿದ್ದು ಈ ಸರ್ಕಾರ. ಸುಮ್ಮನೇ ಯಾವುದೋ ಒಂದು ಆಲಿಬಿ ಬೇಡ. ಒಂದೇನೋ ಮಾಡಬೇಕಾ ಬಿಲ್ ತಂದಿದ್ದೀರಿ, ಮಾಡಿಕೊಂಡು ಹೋಗಿ ಆಷ್ಟೇ.

ಶ್ರೀ ಆರ್.ವಿ. ದೇಶಪಾಂಡೆ (ಭಾರೀ ಕೈಗಾರಿಕಾ ಸಚಿವರು): ಸರ್ಕಾರ ಎಂದರೇ ಏನು? ಅದು ಇಲ್ಲೇ ಕುಳಿತು ಮಾನ್ಯ ಮುಖ್ಯಮಂತ್ರಿಗಳು ಮಾಡಿದರೋ ಏನು ಮಂತ್ರಿಗಳು ಮಾಡಿದರೋ? ಶಾಸಕರು ಮಾಡಿದರೋ ಯಾರು ಮಾಡಿದರು? ನೋಡಿ, ಏನಾಗುತ್ತದೆ ಎಂದರೆ ಯಾವುದೇ ಒಂದು ಕೈಗಾರಿಕೆಯಲ್ಲಿ ಮ್ಯಾನೇಜ್‌ಮೆಂಟ್ ಎನ್ನುವುದು ಬಹಳ ಮುಖ್ಯ. ಕೈಗಾರಿಕೆಯು ಅನಾರೋಗ್ಯ ಆಗಬೇಕಾದರೆ ಹಲವಾರು ಕಾರಣ ಇದೆ. ನೀವು ಹೇಳಿದ ಹಾಗೆ ಮಿಸ್ ಮ್ಯಾನೇಜ್‌ಮೆಂಟ್ ಇರಬಹುದು, ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಸಾರಿ ಸರ್ಕಾರದ ಹಸ್ತಕ್ಷೇಪ ಇರಲಿಕ್ಕೆ ಸಾಧ್ಯ. ಮಿಸ್ ಮ್ಯಾನೇಜ್‌ಮೆಂಟ್ ಇರಲಿಕ್ಕೆ ಸಾಧ್ಯ. ಕಾಂಪಿಟೆಷನ್ ಇರಲಿಕ್ಕೆ ಸಾಧ್ಯ ಮಾರ್ಕೆಟಿಂಗ್ ಪ್ರಾಬ್ಲಮ್ ಇರಲಿಕ್ಕೆ ಸಾಧ್ಯ. ಬೇಕಾದಷ್ಟು ಪ್ರಾಬ್ಲಮ್ಸ್‌ಗಳು ಇವೆ. ಬೇಸಿಕ್ ಏನಾಗಿದೆ? ಬೇಸಿಕ್ ಆಗಿ ಸರ್ಕಾರದ ಕಂಪನಿಗಳು ಬಹಳಷ್ಟು ಚೆನ್ನಾಗಿ ಏಕೆ ನಡೆಯುತ್ತಿಲ್ಲ? ಕೆಲವು ಚೆನ್ನಾಗಿ ನಡೆಯುತ್ತವೆ. ಉದಾಹರಣೆಗೆ ಕೇಂದ್ರ ಸರ್ಕಾರದ ಬಿಪಿಸಿಎಲ್ ನಡೆಯುತ್ತಿದೆ, ಹೆಚ್‌ಪಿಸಿಎಲ್ ನಡೆಯುತ್ತಿದೆ. ನಮ್ಮ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಚೆನ್ನಾಗಿ ನಡೆಯುತ್ತಿದೆ. ನಮ್ಮ ಮೈಸೂರು ಪೇಪರ್ ಮಿಲ್ ಈಗ ಚೆನ್ನಾಗಿ ನಡೆಯುತ್ತಿದೆ. ನಮ್ಮ ಎಂಐಎಸ್‌ಎಲ್ ಚೆನ್ನಾಗಿ ನಡೆಯುತ್ತಿದೆ. ಎಂಸಿಎ ಚೆನ್ನಾಗಿ ನಡೆಯುತ್ತಿದೆ. Sometimes management is also important. Sometimes professionals hae given the results. If you want I will give statistics. ಈಗ ನಾನು ಹೇಳುತ್ತೇನೆ. ಬೇಕಾದರೆ ಸ್ಟಾ ್ಯಟಿಸ್ಟಿಕ್ಸ್ ಕೊಡುತ್ತೇನೆ. ಈಗ ಮೈಸೂರು ಲ್ಯಾಂಪ್ಸ್‌ನಲ್ಲಿ, ಎನ್‌ಜಿಇಫ್‌ನಲ್ಲಿ in the last 8 years, we have not empolyed. one person. ಒಬ್ಬನನ್ನೂ ರಿಕ್ರೂಟ್‌ಮೆಂಟ್ ಮಾಡಲಿಲ್ಲ. ಒಬ್ಬ ಎಂಪ್ಲಾಯಿಯನ್ನೂ ನಾವು ಕೊಟ್ಟಿಲ್ಲ. We have put restrictions. ಮತ್ತೆ ಹಾಗಾದರೆ ಸರ್ಕಾರದ ಹಸ್ತಕೇಪ ಏನು? ಮಂತ್ರಿಗಳು ಮಾಡುವುದು ಏನು? ಹೆಚ್ಚು ಅಂದರೆ ನಮ್ಮ ಕಾಸ್ಟ್ಯುಯೆನ್ಸಿ ಯವರಿಗೆ ಅಥವ ನಿಮ್ಮಂತಹ ಸ್ನೇಹಿತರು 10 ಜನ, 20 ಜನ 50 ಕ್ಕೆ ನೌಕರಿಕೊಡಿಸುವುದು ಇರುತ್ತದೆ ಯಲ್ಲಾ we have not done that. But, still then the industry has become sick, because of so many things like global competitions. There are so many problems. ಅದಕ್ಕೆ ಬಹಳಷ್ಟು ಕಾರಣಗಳು ಇವೆ. ಹಾಗಾಗಿ ನೇರವಾಗಿ ನೀವು ಸರ್ಕಾರ ಎಂದು ಹೇಳಿದರೆ ಬಹಳ ಕಷ್ಟ ಆಗುತ್ತದೆ. ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಸಾರಿ to some extent I agree but ನಮ್ಮ ಗವರ್ನಮೆಂಟ್ ಅಷ್ಟೇ ಅಲ್ಲ. Successive governments have done their best to see that Mysore Lamps or NGEF or several other companies' workers got the salaries. Every month, government gave the salaries. ಮತ್ತೇನು ಸರ್ಕಾರ ಮಾಡುತ್ತದೆ? please understand. But, they could not survive. I don't

claim that this government did. Successive governments have done. ಹಾಗಾಗಿ ನೇರವಾಗಿ ನೀವು ಸರ್ಕಾರ ಮಾಡಿದರೆ ಹೋಗಲಿಕ್ಕೆ ಆಗುವುದಿಲ್ಲ. ಅದರ ಬಗ್ಗೆ ಹಲವಾರು ಕಾರಣಗಳು ಇವೆ. ಅದರಲ್ಲಿ ಸ್ವಲ್ಪ ಜವಾಬ್ದಾರಿ ಸರ್ಕಾರದ್ದು ಇರಬಹುದು. ನಾನು ಜವಾಬ್ದಾರಿ ಹಾರಿಸಿ ಹೋಗುತ್ತಿಲ್ಲ. But, please understand. ಸಿಚ್ಯುಯೇಷನ್ ಪ್ರಕಾರ ನಡೆಯುತ್ತಿದೆ. ಹಾಗಾದರೆ ಎಂಐಎಸ್ಎಲ್ ಚೆನ್ನಾಗಿ ನಡೆಯುತ್ತಿದೆ. ಎಂಸಿಎ ಚೆನ್ನಾಗಿ ನಡೆಯುತ್ತಿದೆ. ಅದಕ್ಕೆ ಏನು ಹೇಳುತ್ತೀರಿ? ಸರ್ಕಾರಕ್ಕೆ ಸರ್ಟಿಫಿಕೇಟ್ ಕೊಡುತ್ತೀರಾ? The Government also cannot take credit. Management is doing well. Marketing conditions are good.

ಶ್ರೀ ಎಸ್.ಎಸ್. ಪಾಟೀಲ್ : ಗವರ್ನಮೆಂಟ್ ಅಂದರೆ ಅಧಿಕಾರಿಗಳ ಮುಖಾಂತರ ನಡೆಸುತ್ತೀರಿ. ಈಗ ಉದಾಹರಣೆಗೆ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್. ಹಿಂದೆ ಪಟೇಲ್ ಎಂಬುವರು ಎಂಡಿ ಆಗಿದ್ದರು. ಆರು ಕೋಟಿ ರೂಪಾಯಿ ಬ್ಯಾಂಕಿನಲ್ಲಿ ಇಟ್ಟು ಹೋಗಿದ್ದರು. ಅವರು ಟ್ರಾನ್ಸ್ಫರ್ ಆಗಿ ಮತ್ತೊಬ್ಬರು ಹೋದ ಕೂಡಲೇ ಆ ಆರು ಕೋಟಿ ರೂಪಾಯಿಯನ್ನೂ ಮುಗಿಸಿ ಹಾನಿಯೊಳಗೆ ಮಾಡಿ ಇಟ್ಟರು.

ಶ್ರೀ ಆರ್.ವಿ. ದೇಶಪಾಂಡೆ: ಈಗ ಪಾಟೀಲ್ ಸಾಹೇಬರಿಗೆ ಏನಾಗಿದೆ? ದಿನ ಪಟೇಲರು ಗದಗ್‌ನಲ್ಲಿ ಭೇಟಿ ಆಗುತ್ತಾರೆ. ಪಾಟೀಲ್ ಎಂದರೆ ಒಳ್ಳೆಯ ಅಧಿಕಾರಿ. ಅವರು ಬಹಳ ಒಳ್ಳೆಯ ಅಧಿಕಾರಿ. ಇವರು ಅವರಿಗೆ ಬಹಳ ಸಮೀಪ ಆಗಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಸಾರ್ವಜನಿಕ ಉದ್ದಿಮೆ ಸಮಿತಿಯಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ. ನೀವು ಹಾಗೆ ಹೇಳಬೇಡಿ. ನಿಮ್ಮ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಿ

ಶ್ರೀ ಆರ್.ವಿ. ದೇಶಪಾಂಡೆ: ನಾನು ಮಾತನಾಡುತ್ತೇನೆ. ತಾವು ಕೂಡಿ.

ಶ್ರೀ ಎಸ್.ಎಸ್. ಪಾಟೀಲ್: ಸಾರ್ವಜನಿಕ ಉದ್ದಿಮೆ ಸಮಿತಿಯಲ್ಲಿ ನಿಮ್ಮ ಉದ್ದಿಮೆಗಳ ಬಗ್ಗೆ ಎಲ್ಲಾ ವಿವರ ತರಿಸಿಕೊಂಡಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ: ನಾನು ಮಾತನಾಡುತ್ತೇನೆ, ತಾವು ಕೂಡಿ. ಇವತ್ತೂ ಸಹ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಚೆನ್ನಾಗಿ ಕೆಲಸ ಮಾಡುತ್ತಿದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ: ಹಾಗಾದರೆ ಅದನ್ನು ಏಕೆ ಮಾರಾಟಕ್ಕೆ ಇಟ್ಟರು?

ಶ್ರೀ ಆರ್.ವಿ. ದೇಶಪಾಂಡೆ: ನಾನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಒಳ್ಳೆಯದು ಇದ್ದರೆ ಅದನ್ನು ಮಾರಾಟಕ್ಕೆ ಏಕೆ ನೀವು ತಂದಿರಿ?

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಪಟೇಲ್ ಅವರು ಇದ್ದಾರಲ್ಲಾ, he is a good officer, ನಾನೇನೂ ವಾದ ಮಾಡಿಲ್ಲ, ನಾನು ಮಂತ್ರಿಯಾಗಿದ್ದೆ ಅವರು ಎಂಡಿ ಆಗಿದ್ದಾಗ. He was one of the very good officers. ಆದರೆ ಪಟೇಲ್ ಹೋದ ನಂತರ ಅನಾಹುತ ಆಗಿದೆ ಎಂದು ಹೇಳಬೇಡಿ ಅನಾಹುತ ಆಗಿಲ್ಲ. ಇನ್ನೂ ಚೆನ್ನಾಗಿ ನಡೆಯುತ್ತಿದೆ. ಈಗ ಪಟೇಲ್ ಅವರು ಹೋದ ನಂತರ ಆಚಾರ್ ಅವರು ಬಂದರು. Do you sat that Achar is not a competent officer?

(ಮುಂದಲ)

ಶ್ರೀ ಎಸ್.ಎಸ್. ಪಾಟೀಲ್:- ಒಬ್ಬರು ಚೆನ್ನಾಗಿ ಕೆಲಸ ಮಾಡಿದ್ದನ್ನು ಇನ್ನೊಬ್ಬರು ಬಂದು ಗುಡಿಸಿ ಹೋದರು, ನಾವು ಸಾರ್ವಜನಿಕ ಉದ್ದಿಮೆ ಸಮಿತಿಯಲ್ಲಿ ವಿವರ ತರಿಸಿದ್ದೇವೆ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ತಾವು ಹೇಳಿದ್ದನ್ನು ನಾನು ಪೂರ್ತಿ ಒಪ್ಪಿಕೊಳ್ಳುತ್ತೇನೆ. ಸರ್ಕಾರದ್ದು ಕೆಲವು ಭಾಗ ಇದೆ. ಮಿಸ್ ಮ್ಯಾನೇಜ್‌ಮೆಂಟ್, ಅವೆಲ್ಲಾ ಇದೆ. ಯಾವಾಗ ಸರ್ಕಾರದಲ್ಲಿ ಇರುವವರಿಗೆ ಎನ್‌ಜಿಇಎಫ್‌ನ ಟ್ರಾನ್ಸಫಾರ್ಮ್‌ಗಿಂತ ಎನ್‌ಜಿಇಎಫ್ ಬೆಲೆ ಬಾಳು ಜಮೀನಿನ ಮೇಲೆ ಕಣ್ಣು ಬೀಳುತ್ತದೆ, ಅಟೆನ್‌ಷನ್ ಹೋಗುತ್ತದೆ, ಡೈವರ್ಟ್ ಆಗುತ್ತದೆ, ಆಗ ಎನ್‌ಜಿಇಎಫ್ ಸಾಯುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ: ಒಂದು ಇಂಚು ಲ್ಯಾಂಡ್ ಯಾರಾದರೂ ಆಕ್ಷನ್ ಇಲ್ಲದೆ ಮಾರಾಟ ಆಗಿದೆಯಾ ನೋಡಿ. ಇಲ್ಲೇ ಸ್ಟಾಪ್ ಮಾಡುತೇನೆ. ಒಂದು ಇಂಚು ಎನ್‌ಜಿಇಎಫ್ ಲ್ಯಾಂಡ್ ಯಾರಿಗಾದರೂ ಪ್ರೈವೇಟ್‌ಗೆ ಕೊಟ್ಟಿದ್ದರೆ, I will not be here as a Minister.

Sri. S.Suresh Kumar:- Because, there is a High Court.

Sir. R.V.Deshpande:- No. Only some land was given to a Government of India Company. Public sector undertakings of Govt of India have taken. No private parties. Please understand this. ಕೇಂದ್ರ ಸರ್ಕಾರದ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್‌ಗಳು ಜಾಗವನ್ನು ತೆಗೆದುಕೊಂಡಿವೆ. ಒಂದು ವಿಷಯ ಬಂದಾಗ ಅದರ ಬಗ್ಗೆ ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್: ಬಜೆಟ್ ಮೇಲೆ ಬಂದಾಗ ಮಾತನಾಡುವಿರಂತೆ.

ಶ್ರೀ ಆರ್.ವಿ. ದೇಶಪಾಂಡೆ: ಪಾಟೀಲ್ ಅವರೇ, ನಾವು ವಿಚಾರ ಎತ್ತಿಲ್ಲ. ಅವರು ವಿಚಾರ ಪ್ರಸ್ತಾಪ ಮಾಡಿದಾಗ ನಾವು ಹೇಳಬೇಕು. It was raised in the Council. I assured the House that if the tender process is not correct, I will cancel. For your information, I have cancelled it. It is on record. ಹಾಗಾಗಿ ಗವರ್ನಮೆಂಟ್ ಪಾರದರ್ಶಿಕವಾಗಿ ಕೆಲಸ ಮಾಡುತ್ತಿದೆ. ಕೇಂದ್ರ ಸರ್ಕಾರಕ್ಕೆ ಕೊಟ್ಟಿದ್ದು ತಪ್ಪು ಎಂದು ನೀವು ಹೇಳಿದರೆ, ಕೇಂದ್ರ ಸರ್ಕಾರದ ಕಂಪನಿಗೆ ಕೊಟ್ಟಿರುವುದರಲ್ಲಿ ದುರ್ವ್ಯವಹಾರ ಆಗಿದೆ ಎಂದು ಹೇಳಿದರೆ, there is no answer. That is left to you.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಮಹದೇವ್(ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, "2002ರ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ

"2002ರ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು: "ಖಂಡ 2 ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ಹೆಸರು ದೀರ್ಘ ಶೀಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಉಪಾಧ್ಯಕ್ಷರೆ, "2002ರ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕವನ್ನು ಅಂಗೀಕರಿಸಬೇಕು ಕೋರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ

"2002ರ ಕರ್ನಾಟಕ ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(ಇ) ಕರ್ನಾಟಕ ಪೌರನಿಗಮಗಳ (ಎರಡನೇ ತಿದ್ದುಪಡಿ) ವಿಧೇಯಕ, 2002

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ, "ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2002ನೇ ಸಾಲಿನ ಪೌರನಿಗಮಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ".

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಗದೀಶ್ ಶೆಟ್ಟರ್: ಮ್ಯಾನ್ಯ ಉಪಾಧ್ಯಕ್ಷರೆ, ನಿಯಮ 69ರಡಿ ಬರಗಾಲ ಮತ್ತು ಕುಡಿಯುವ ನೀರಿನ ಸಮಸ್ಯೆ ಕುರಿತಂತೆ ಚರ್ಚೆ ಅಪೂರ್ಣವಾಗಿರುವುದರಿಂದ ಮುಂದುವರೆಸುವುದಕ್ಕೆ ಅವಕಾಶ ಕಲ್ಪಿಸಿಕೊಡಬೇಕು.

ಉಪಾಧ್ಯಕ್ಷರು: ಕಳೆದೆರಡು ದಿವಸಗಳಿಂದ ಯಾವುದೇ ವಿಧೇಯಕಗಳನ್ನು ಪರ್ಯಾಲೋಚನೆಗೆ ತೆಗೆದುಕೊಂಡಿಲ್ಲ. ಬಿಎಸಿಯಲ್ಲಿ ತೀರ್ಮಾನವಾಗಿರುವಂತೆ ಎರಡು ವಿಧೇಯಕಗಳನ್ನಾದರೂ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕಾಗುತ್ತದೆ.